ಆರ್ಬಿಟ್ ಸಂಸ್ಥೆ, ಹುಮನಾಬಾದ ಮತ್ತು

ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ, ಕಲಬುರಗಿ

# ಸೇವಾವಾಣಿ

## ಮೇ 2024








**MAY 2024**

## "ಗ್ರಾಮಸ್ಥ ಜನರಲ್ಲಿ ಅರಿವು ಮೂಡಿಸುಲು ಆರ್ಬಿಟ್ ಸಿಬ್ಬಂದಿಗಳಿಂದ ಬೀದಿ ನಾಟಕ ಪ್ರದರ್ಶನ"

ಎಪ್ರಿಲ್ ತಿಂಗಳಿನಲ್ಲಿ ದಿನಾಂಕ 15,16,18,19 2024 ರಂದು ಸುಮಾರು 4 ದಿನಗಳ ಕಾಲ ಹುಮ್ನಾಬಾದ್ ತಾಲೂಕಿನ ಹಳ್ಳಿಗಳಾದ ಜಲಸಂಗಿ, ಬೆನಚಿಂಚೋಳಿ, ಸಿಂದನಕೇರಾ ಹಾಗೂ ಕಲ್ಲೂರ ಗ್ರಾಮಗಳಲ್ಲಿ ಆರ್ಬಿಟ್ ಸಂಸ್ಥೆಯ ವತಿಯಿಂದ ಲಿಂಗ ಸಮಾನತೆ, ಮಾನಸಿಕ ಅಸ್ವಸ್ಥತೆ, ಕ್ಯಾನ್ಸರ್ ಜಾಗೃತಿ, ಮಧ್ಯಪಾನದಿಂದಾಗುವ ದುಷ್ಪಪರಿಣಾಮಗಳು ಹಾಗೂ ಲೋಕಸಭಾ ಚುನಾವಣೆಯ ಬಗ್ಗೆ ಬೀದಿ ನಾಟಕದ ಮೂಲಕ ಜನರಲ್ಲಿ ಜಾಗೃತಿ ಮೂಡಿಸಲಾಯಿತು. ಈ ಕಾರ್ಯಕ್ರಮವನ್ನು ಪ್ರತಿ ಹಳ್ಳಿಗಳಲ್ಲಿ ಸಂಜೆ ಸುಮಾರು 6:30 ಗಂಟೆಗೆ ಪ್ರಾರಂಭಿಸಿ ರಾತ್ರಿ 8:30 ಗಂಟೆಯ ವರೆಗೆ ಕೊನೆಗೊಳ್ಳಿಸಲಾಯಿತು. ಪ್ರತಿ ಹಳ್ಳಿಯಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಿಗೆ ಸಂಪೂರ್ಣ ಬೆಂಬಲವನ್ನು ನೀಡುವುದರ ಮೂಲಕ ಅವರ ಸಮಾಜ ಸೇವೆಯನ್ನು, ಸಮಾಜದ ಮೇಲಿನ ಕಾಳಜಿಯನ್ನು ಉತ್ತೇಜಿಸಿದರು. ಈ ಬೀದಿ ನಾಟಕವನ್ನು ವೀಕ್ಷಿಸಲು ಪ್ರತಿ ಹಳ್ಳಿಯಲ್ಲಿ ಸರ್ವಜನರು ಭಾಗವಹಿಸಿ ಚುನಾವಣೆಯ, ಮಧ್ಯವಸನದ, ಲಿಂಗ ಸಮಾನತೆಯ, ಮಾನಸಿಕ ಅಸ್ವಸ್ಥತೆಯ ಹಾಗೂ ಕ್ಯಾನ್ಸರ್ ರೋಗದ ಕುರಿತು ಸಂಪೂರ್ಣ ಮಾಹಿತಿಯನ್ನು ಪಡೆದುಕೊಂಡರು. ಈ ಬೀದಿ ನಾಟಕಗಳನ್ನು ರಚಿಸಿದ ಅರುಣಕುಮಾರ್ ಕೋಟೆ ಹಾಗೂ ಸಮಾಜ ಸೇವೆಯ ಅನುಭವ ಪಡೆಯಲೆಂದು ಬೆಂಗಳೂರು ಮತ್ತು ಮಂಗಳೂರಿನ ಗುರುಮಠದಿಂದ ಆಗಮಿಸಿದ ಎಲ್ಲಾ ಗುರು ಅಭ್ಯಾರ್ಥಿಗಳಿಗೆ ಹಾಗೂ ಆರ್ಬಿಟ್ ಸಂಸ್ಥೆಯ ಸಿಬ್ಬಂಧಿಗಳ ಪ್ರೋತ್ಸಾಹ ಹಾಗೂ ಆಸಕ್ತಿಗಾಗಿ ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ವಂದನೀಯ ಗುರುಗಳು ವಿಕ್ಟರ್ ವಾಸ್ ಹಾಗೂ ಸಹ ನಿರ್ದೇಶಕರಾದ ವಂದನೀಯ ಗುರುಗಳು ವಿಜಯಕುಮಾರ್ ರವರು ಧನ್ಯವಾದಗಳನ್ನು ಸಲ್ಲಿಸಿದರು.



ಪೂಜ್ಯ ರಾಬರ್ಟ್ ಮಿರಾಂದಾ
ಗುಲಬರ್ಗಾ ಧರ್ಮಾಧ್ಯಕ್ಷರು

ವಂ. ಫಾ॥ ವಿಕ್ಟರ್ ವಾಸ್
ನಿರ್ದೇಶಕರು, ಆರ್ಬಿಟ್ ಮತ್ತು
ಸೇವಾ ಸಂಗಮ ಸಂಸ್ಥೆ, ಕಲಬುರಗಿ











orbit humnabad
Orbit Bidar
@orbitbidar330
www.orbitbidar.in
+91 8660968063
+91 8971119914
Orbitbidar93@gmail.com

# “ನವಜೀವನ (ಎ.ಪಿ.ಎಫ್) ಕಾರ್ಯಕ್ರಮ”

## “ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಒಂದು ದಿವಸದ ಮಾನಸಿಕ ಅಸ್ವಸ್ಥತೆಯ ಕುರಿತು ತರಬೇತಿ”



ಏಪ್ರಿಲ್ 26 2024 ರಂದು ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ನವ ಜೀವನ ಕಾರ್ಯಕ್ರಮ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಹುಡುಗಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಒಂದು ದಿವಸದ ಮಾನಸಿಕ ಅಸ್ವಸ್ಥತೆಯ ಕುರಿತು ತರಬೇತಿಯನ್ನು ಆಯೋಜಿಸಲಾಗಿತ್ತು. ಈ ತರಬೇತಿಗೆ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಅರುಣ್ ಕುಮಾರ್ ರಂಜೇರಿಯವರು ಭಾಗವಹಿಸಿ, ಮಾನಸಿಕ ಅಸ್ವಸ್ಥತೆಯ ಕುರಿತು ತರಬೇತಿ ನೀಡಿದರು. ಪ್ರತಿಯೊಬ್ಬರ ಕಾರ್ಯ ವ್ಯಾಪ್ತಿಯಲ್ಲಿ ಮಾನಸಿಕ ಅಸ್ವಸ್ಥರು ಕಂಡು ಬಂದರೆ, ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಿಗೆ ಮಾಹಿತಿ ನೀಡುವಂತೆ ತಿಳಿಸಿದರು. ಆರ್ಬಿಟ್ ಸಂಸ್ಥೆಯು ಪ್ರಾರಂಭಿಸಿದ ಮಾನಸಿಕ ಅಸ್ವಸ್ಥರ ಸಹಾಯವಾಣಿ ಕುರಿತು ಮಾಹಿತಿ ನೀಡಿ, ಸಾರ್ವಜನಿಕರು ಕರೆ ಮಾಡುವ ಮೂಲಕ ಮಾನಸಿಕ ಆರೋಗ್ಯ ಹಾಗೂ ಮಾನಸಿಕ ಅಸ್ವಸ್ಥತೆಯ ಬಗ್ಗೆ ಮಾಹಿತಿ ಪಡೆಯಬಹುದು ಎಂದು ವಿವರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಅಂಗನವಾಡಿ ಮೇಲ್ವಿಚಾರಕಿಯಾದ ಶ್ರೀಮತಿ ದೈವತ ಹಾಗೂ 35 ಅಂಗನವಾಡಿ ಕಾರ್ಯಕರ್ತರು ಭಾಗವಹಿಸಿ ಮಾನಸಿಕ ಅಸ್ವಸ್ಥತೆಯ ಕುರಿತು ತರಬೇತಿಯನ್ನು ಪಡೆದುಕೊಂಡರು. ಈ ಸಂದರ್ಭದಲ್ಲಿ ನವ ಜೀವನ ಕಾರ್ಯಕ್ರಮದ ಆಪ್ತ ಸಮಾಲೋಚಕರಾದ ಶ್ರೀ ಅರುಣ್ ಕುಮಾರ್ ಉಪಸ್ಥಿತರಿದ್ದರು.



ಏಪ್ರಿಲ್ 24 2024 ರಂದು ಆರ್ಬಿಟ್ ಸಂಸ್ಥೆ ಯ ನವ ಜೀವನ ಕಾರ್ಯಕ್ರಮ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಕನಕಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಶಾ ಕಾರ್ಯಕರ್ತರಿಗೆ ಒಂದು ದಿನದ ಮಾನಸಿಕ ಅಸ್ವಸ್ಥತೆಯ ಕುರಿತು ತರಬೇತಿಯನ್ನು ನೀಡಲಾಯಿತು. ಈ ತರಬೇತಿಗೆ ಸಂಪನ್ಮೂಲ ವ್ಯಕ್ತಿಯಾಗಿ ನವ ಜೀವನ ಕಾರ್ಯಕ್ರಮದ ಆಪ್ತ ಸಮಾಲೋಚಕರಾದ ಅರುಣ್ ಕುಮಾರ್ ಕೋಟೆಯವರು ಭಾಗವಹಿಸಿದರು. ಮಾನಸಿಕ ಅಸ್ವಸ್ಥತೆ ಹಾಗೂ ಮಾನಸಿಕ ಆರೋಗ್ಯದ ಕುರಿತು ವಿವರವಾಗಿ ತಿಳಿಸುವ ಮೂಲಕ ಮಾನಸಿಕ ಅಸ್ವಸ್ಥರು ನಿಮ್ಮ ಕಾರ್ಯಕ್ಷೇತ್ರದಲ್ಲಿ ಕಂಡು ಬಂದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಿಗೆ ಮಾಹಿತಿ ನೀಡುವ ಮೂಲಕ ಅವರನ್ನು ಸಮುದಾಯದಲ್ಲಿ ಪುನರ್ವಸತಿ ಕಲ್ಪಿಸಲು ಕೈಜೋಡಿಸಬೇಕು ಎಂದು ಮನವಿ ಮಾಡಿದರು. ಆರ್ಬಿಟ್ ಸಂಸ್ಥೆಯು ಹೊಸದಾಗಿ ಪ್ರಾರಂಭಿಸಿದ ಮಾನಸಿಕ ಅಸ್ವಸ್ಥರ ಸಹಾಯವಾಣಿಯ ಕುರಿತು ಮಾಹಿತಿ ನೀಡಿದರು. ಈ ಸಹಾಯವಾಣಿಗೆ ಕರೆ ಮಾಡುವ ಮೂಲಕ ಮಾನಸಿಕ ಆರೋಗ್ಯದ ಕುರಿತು ಮಾಹಿತಿಯನ್ನು ಪಡೆಯಬಹುದು ಎಂದು ತಿಳಿಸಿದರು. ಈ ತರಬೇತಿ ಕಾರ್ಯಕ್ರಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು, ಆಶಾ ಕಾರ್ಯಕರ್ತೆಯರ ಮೇಲ್ವಿಚಾರಕಿ ಹಾಗೂ 35 ಆಶಾ ಕಾರ್ಯಕರ್ತರು ಭಾಗವಹಿಸಿದರು. ನವಜೀವನ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಪ್ರವೀಣ್ ಅವರು ಭಾಗವಹಿಸಿ ಸಂಸ್ಥೆಯ ಗುರಿ ಉದ್ದೇಶಗಳನ್ನು ತಿಳಿಸಿದರು.

## “ಜ್ಞಾನಜ್ಯೋತಿ ಮಾನಸಿಕ ಅಸ್ವಸ್ಥರ ಪೋಷಕರ ಸಂಘ ರಚನೆ”



22 ಏಪ್ರಿಲ್ 2024 ರಂದು ಹುಮನಾಬಾದ್ ತಾಲೂಕಿನ ಹಳ್ಳಿಖೇಡವಾಡಿ ಗ್ರಾಮದಲ್ಲಿ ಮಾನಸಿಕ ಅಸ್ವಸ್ಥರ ಫಲಾನುಭವಿಗಳ ಕುಟುಂಬದವರನ್ನು ಒಟ್ಟು ಸೇರಿಸಿ ಮಾನಸಿಕ ಅಸ್ವಸ್ಥರ ಪೋಷಕರ ಸಂಘ ರಚನೆ ಮಾಡಲಾಯಿತು. ಸಂಘಕ್ಕೆ ಜ್ಞಾನಜ್ಯೋತಿ ಮಾನಸಿಕ ಅಸ್ವಸ್ಥರ ಪೋಷಕರ ಸಂಘ ಎಂದು ಹೆಸರಿಡಲಾಯಿತು. ಸರ್ಕಾರದಿಂದ ಸಿಗುವ ಸೌಲಭ್ಯಗಳ ಬಗ್ಗೆ ತಿಳಿಸಲಾಯಿತು ಮತ್ತು ಮಾನಸಿಕ ಅಸ್ವಸ್ಥರಿಗೆ ಔಷಧಿಯನ್ನು ಕೊಡುವ ಬಗ್ಗೆ, ಅವರನ್ನು ಹೇಗೆ ನೋಡಿಕೊಳ್ಳಬೇಕು, ಪ್ರೀತಿ ಕರುಣೆ ತಾಳ್ಮೆಯಿಂದ ಮಾನಸಿಕ ಅಸ್ವಸ್ಥರನ್ನು ನೋಡಿಕೊಳ್ಳುವಂತೆ ತಿಳಿಸಲಾಯಿತು. ಮಾನಸಿಕ ಅಸ್ವಸ್ಥರನ್ನು ಸಮುದಾಯದಲ್ಲಿ ಒಂದ ಎಂಬಂತೆ ನೋಡಿಕೊಳ್ಳಬೇಕು, ಚಿಕ್ಕ ಪುಟ್ಟ ಕೆಲಸಗಳಲ್ಲಿ ತೊಡಗುವಂತೆ ಅವರನ್ನು ಪ್ರೇರೇಪಿಸಬೇಕು ಹಾಗೂ ಸಮಯಕ್ಕೆ ಸರಿಯಾಗಿ ಮಾತ್ರೆಗಳನ್ನು ನೀಡಬೇಕು, ಅವರನ್ನು ಏಕಾಂಗಿಯಾಗಿ ಬಿಡದೆ ಸದಾ ಚಟುವಟಿಕೆಯಿಂದ ಕುಡಿರುವಂತೆ ನೋಡಿಕೊಳ್ಳಬೇಕು ಎಂದು ಸಂಘದ ಸದಸ್ಯರಿಗೆ ವಿವರಿಸಲಾಯಿತು.

## “ಜೈ ಲಕ್ಷ್ಮೀ ವಿಶೇಷ ವಿಕಲಚೇತನರ ಸಂಘದ ಸಭೆ”



01 ಏಪ್ರಿಲ್ 2024 ರಂದು ಹುಮನಾಬಾದ್ ತಾಲೂಕಿನ ಅಮಿರಾಬಾದ್ ವಾಡಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮತ್ತು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಜೈ ಲಕ್ಷ್ಮೀ ವಿಶೇಷ ವಿಕಲಚೇತನರ ಸಂಘದ ಸಭೆ ನಡೆಲಾಯಿತು. ಈ ಸಭೆಯಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ನೀಲಕಂಠ ಅವರು ಭಾಗವಹಿಸಿ ಸರ್ಕಾರದ ಸೌಲಭ್ಯ ಪಡೆಯಲು ಪ್ರತಿಯೊಬ್ಬರು ಮುಂದೆ ಬರಬೇಕು, ಸೌಲಭ್ಯದಿಂದ ಯಾರು ವಂಚಿತರಾಗಬಾರದು, ಒಂದು ವೇಳೆ ಸೌಲಭ್ಯದಿಂದ ವಂಚಿತರಾದರೆ ಸಂಘದ ಮೂಲಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕು. ಆದ್ದರಿಂದ ಪ್ರತಿಯೊಬ್ಬ ಸಂಘದ ಸದಸ್ಯರು ಪ್ರತಿ ತಿಂಗಳು ಈ ಸಭೆಯಲ್ಲಿ ಭಾಗವಹಿಸಬೇಕು ಮತ್ತು ಪ್ರತಿಯೊಂದು ವಿಷಯದಲ್ಲಿ ಭಾಗವಹಿಸಿ, ಚರ್ಚಿಸಿ ತಮ್ಮ ಹಕ್ಕುಗಳಿಗಾಗಿ ಹೋರಾಡಬೇಕೆಂದು ಮಾರ್ಗದರ್ಶನ ನೀಡಿದರು.

## "ನರೇಗಾ ಕೋಲಿ ಕಾರ್ಮಿಕರಿಗೆ ಮಾನಸಿಕ ರೋಗದ ಕುರಿತು ಅರಿವು"



ಏಪ್ರಿಲ್ 22/2024 ರಂದು ಹುಮನಾಬಾದ ತಾಲೂಕಿನ ಸಿತಾಳ್ಗೆರ ಗ್ರಾಮದ ನರೇಗಾ ಕೂಲಿ ಕಾರ್ಮಿಕರಿಗೆ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮತ್ತು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಂಯುಕ್ತ ಆಶಯದಲ್ಲಿ ನರೇಗಾ ಕೋಲಿ ಕಾರ್ಮಿಕರಿಗೆ ಮಾನಸಿಕ ರೋಗದ ಕುರಿತು ಅರಿವು ಮೂಡಿಸಲಾಯಿತು. ಖಿನ್ನತೆ ಅನ್ನೋದು ಒಂದು ಕಾಯಿಲೆ, ಮಾನಸಿಕ ಕಾಯಿಲೆಯ ಲಕ್ಷಣಗಳಾದ ನಿದ್ರಾ ಹೀನತೆ, ವಿಚಿತ್ರ ನಡವಳಿಕೆ, ವಿನಾಕಾರಣ ಅಳುವುದು, ವಿನಾಕಾರಣ ನಗುವದು, ವಿಪರೀತವಾದ ಮಾತುಗಳು, ತನ್ನಲ್ಲೇ ತಾನು ಮಾತನಾಡುವುದು ಮತ್ತು ಜನರೊಂದಿಗೆ ಬೆರೆಯದೆ ಇರುವಂಥ ಲಕ್ಷಣಗಳು ಒಬ್ಬ ವ್ಯಕ್ತಿಯಲ್ಲಿ ಕಂಡು ಬಂದರೆ ತಕ್ಷಣವೇ ವೈದ್ಯರ ಸಂಪರ್ಕಿಸಿ ಚಿಕಿತ್ಸೆಗೆ ಒಳಪಡಬೇಕು. ಸರ್ಕಾರಿ ಆಸ್ಪತ್ರೆಯಲ್ಲಿ ಮಾನಸಿಕ ಅಸ್ವಸ್ಥರ ತಪಾಸಣೆ ಹಾಗೂ ಚಿಕಿತ್ಸೆಗಾಗಿ ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರ ನಡೆಯುತ್ತದೆ ಇಲ್ಲಿ ತಜ್ಞ ಮನೋವೈರೀಂದ ಉಚಿತ ತಪಾಸಣೆ ಹಾಗೂ ಮಾತ್ರೆಗಳನ್ನು ನೀಡಲಾಗುತ್ತದೆ.ಆದ್ದರಿಂದ ಈ ಮೇಲ್ಕಂಡ ಮಾನಸಿಕ ಲಕ್ಷಣಗಳು ಕಂಡು ಬಂದರೆ ವೈದ್ಯರನ್ನು ಸಂಪರ್ಕಿಸಿ ಎಂದು ಜಾಗೃತಿ ಮೂಡಿಸಲಾಯಿತು.

## "ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ"



ಎಪ್ರಿಲ್ 05/2024 ರಂದು ಹುಮ್ನಾಬಾದ್ ತಾಲೂಕಿನ ಧುಮ್ಮನಸೂರು ಗ್ರಾಮದ ಕೂಲಿ ಕಾರ್ಮಿಕರಿಗೆ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮತ್ತು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ರೋಗದ ಕುರಿತು ಅರಿವು ಮೂಡಿಸಲಾಯಿತು. ಖಿನ್ನತೆ ಅನ್ನೋದು ಒಂದು ಕಾಯಿಲೆ ಆದ್ದರಿಂದ ಯಾರೂ ಭಯ ಪಡುವ ಅವಶ್ಯಕತೆ ಇಲ್ಲ, ಮನುಷ್ಯರಲ್ಲಿ ಮಾನಸಿಕ ರೋಗದ ಲಕ್ಷಣಗಳು ಕಂಡುಬಂದರೆ ತಕ್ಷಣವೇ ವೈದ್ಯರನ್ನು ಸಂಪರ್ಕಿಸಬೇಕು. ಮಾನಸಿಕ ಅಸ್ವಸ್ಥರಿಗಾಗಿ ಹುಮ್ನಾಬಾದ್ ನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರತಿ ಬುಧುವಾರ ತಜ್ಞ ಮನೋವೈದ್ಯರಿಂದ ಸೂಕ್ತ ಹಾಗೂ ಉಚಿತ ಚಿಕಿತ್ಸೆ ಕೊಡಲಾಗುತ್ತದೆ ಆದ್ದರಿಂದ ಚಿಕಿತ್ಸೆಗೆ ಒಳಗಾಗುವಂತೆ ಮಾರ್ಗದರ್ಶನ ನೀಡಲಾಯಿತು. ಆರ್ಬಿಟ್ ಸಂಸ್ಥೆಯ ಮೂಲಕವೂ ಸಹ ಮಾನಸಿಕ ಅಸ್ವಸ್ಥ ರೋಗಿಗೆ ಅಗತ್ಯವಿದ್ದರೆ ಪ್ರತಿ ತಿಂಗಳು ಆಪ್ತ ಸಮಾಲೋಚನೆಗೆ ಒಳಪಡಿಸಲಾಗುತ್ತದೆ ಎಂದು ಮಾಹಿತಿ ನೀಡಲಾಯಿತು.

## "ಮಾನಸಿಕ ಅಸ್ವಸ್ಥರಿಗೆ ಆಪ್ತ ಸಮಾಲೋಚನೆ"



ಏಪ್ರಿಲ್ 22 ಮತ್ತು 23 2024 ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಖೇಡ ಕೆ ವಾಡಿ ಮತ್ತು ಡಾಕುಳಗಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ನಡೆಯುತ್ತಿರುವ ನವಜೀವನ ಕಾರ್ಯಕ್ರಮದ ಆಪ್ತ ಸಮಾಲೋಚಕರಾದ ಶ್ರೀ. ರವಿ ಜಿ ರವರು ಮಾನಸಿಕ ಅಸ್ವಸ್ಥರನ್ನು ಸಮುದಾಯಧಾರಿತ ಪುನರ್ವಸತಿಕಲ್ಪಿಸುವ ನಿಟ್ಟಿನಲ್ಲಿ ಮಾನಸಿಕ ಅಸ್ವಸ್ಥರನ್ನು ಆಪ್ತ ಸಮಾಲೋಚನೆ ನೀಡುವ ಮೂಲಕ ಅಸ್ವಸ್ಥತೆಯಿಂದ ಹೊರಬರುವಂತೆ ಹಾಗೂ ಸಮುದಾಯದಲ್ಲಿ ಸಹಜ ಜೀವನ ನಡೆಸುವಂತೆ ಉತ್ತೇಜಿಸಲಾಯಿತು. ಮುಂದುವರೆದು ಮಾನಸಿಕ ಅಸ್ವಸ್ಥರ ಪೋಷಕರು ನಿರಂತರ ಮಾನಸಿಕ ಅಸ್ವಸ್ಥರ ಶಿಬಿರಕ್ಕೆ ಭೇಟಿ ನೀಡಿ, ಮನೋವೈದ್ಯರಿಂದ ಆಪ್ತ ಸಮಾಲೋಚನೆ ಪಡೆದುಕೊಂಡು ಉಚಿತ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ ಹಾಗೂ ಫಲಾನುಭವಿಗಳ ಪೋಷಕರು ಸಹ ಮುಂದಾಳತ್ವ ವಹಿಸಿಕೊಂಡು ಅವರಿಗೆ ಉತ್ತಮ ರೀತಿಯಿಂದ ನೋಡಿಕೊಳ್ಳುತ್ತಿದ್ದಾರೆ.ಕಡು ಬಡತನದಲ್ಲಿರುವ ಮಾನಸಿಕ ಅಸ್ವಸ್ಥರು ಈ ಮುಂಚೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ತಿಂಗಳಿಗೆ ನಾಲ್ಕರಿಂದ ಐದು ಸಾವಿರ ರೂಪಾಯಿ ಖರ್ಚು ಮಾಡುತ್ತಿದ್ದರು.ಸದ್ಯ ಸರಕಾರಿ ಮಾನಸಿಕ ಅಸ್ವಸ್ಥರ ಶಿಬಿರಕ್ಕೆ ಭೇಟಿ ನೀಡುವ ಮೂಲಕ ಉಚಿತ ಚಿಕಿತ್ಸೆ ಪಡೆಯುತ್ತಿದ್ದಾರೆ ಮತ್ತು ಮನೋವೈದ್ಯರ ಸಲಹೆ ಸೂಚನೆಯನ್ನು ಪಾಲಿಸುತ್ತಿದ್ದಾರೆ. ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರು ನಮಗೆ ಸರಿಯಾದ ಮಾರ್ಗ ತೋರಿದ್ದರಿಂದ ಇಂದು ನಮ್ಮ ಹಣ, ಆರೋಗ್ಯ ಹಾಗೂ ಸಮಯದ ಉಳಿತಾಯವಾಗಿದೆ ಇದರಿಂದ ನಮ್ಮ ಕುಟುಂಬಕ್ಕೆ ತುಂಬಾ ಸಹಾಯವಾಗಿದೆ .ಇನ್ನು ಮುಂದೆ ನಮ್ಮ ಗ್ರಾಮದ ವ್ಯಾಪ್ತಿಯಲ್ಲಿ ಮಾನಸಿಕ ಅಸ್ವಸ್ಥರು ಹೊಸದಾಗಿ ಕಂಡು ಬಂದರೆ, ಆರ್ಬಿಟ್ ಸಂಸ್ಥೆ ಯ ಸಹಾಯವಾಣಿಗೆ ಕರೆ ಮಾಡುವ ಮೂಲಕ ಮತ್ತು ಕಾರ್ಯಕರ್ತರಿಗೆ ಮಾಹಿತಿ ನೀಡುವ ಮೂಲಕ ಮಾನಸಿಕ ಅಸ್ವಸ್ಥರ ಪುನರ್ವಸತಿ ಕಲ್ಪಿಸುವಲ್ಲಿ ಕೈಜೋಡಿಸುತ್ತೇವೆ ಎಂದು ತಿಳಿಸಿದರು.



## “ಕ್ಯಾನ್ಸರ್ ಜಾಗೃತಿ ಒಂದು ದಿನದ ಕಾರ್ಯಗಾರಾ”



ಏಪ್ರಿಲ್ 20 ರಂದು ಹುಮನಾಬಾದ್ ತಾಲೂಕಿನ ಆರ್ಬಿಟ್ ಸಂಸ್ಥೆಯ ಸಭಾಂಗಣದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಇಂಡಿಯನ್ ಕ್ಯಾನ್ಸರ್ ಸೊಸೈಟಿ ಸಹಯೋಗದಲ್ಲಿ ಕ್ಯಾನ್ಸರ್ ರೋಗದ ಕುರಿತು ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಈ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಇಂಡಿಯನ್ ಕ್ಯಾನ್ಸರ್ ಸೊಸೈಟಿ ಜಿಲ್ಲಾ ಸಂಯೋಜಕರಾದ ಗುರುರಾಜ್ ಕುಲಕರ್ಣಿ ಅವರು ಕ್ಯಾನ್ಸರ್ ರೋಗದ ಕುರಿತು ಮಾಹಿತಿಯನ್ನು ನೀಡಿದರು. ಕ್ಯಾನ್ಸರ್ ರೋಗವು ಇತ್ತೀಚಿನ ದಿನಗಳಲ್ಲಿ ತೀವ್ರತೆಯಿಂದ ಹರಡುತ್ತಿದೆ, ಇದನ್ನು ಕುರಿತು ಅರಿವು ಹೋಂದುವ ಮೂಲಕ ತಡೆಗಟ್ಟುಕೊಳ್ಳಬಹುದು ಹಾಗು ಕ್ಯಾನ್ಸರ್‌ಗೆ ಇರುವ ಸೂಕ್ತ ಚಿಕಿತ್ಸೆಯ ಬಗ್ಗೆ ತಿಳಿಸಿದರು. ನೀವು ಭೇಟಿ ಮಾಡುವ ಪ್ರತಿ  ಹಳ್ಳಿಯಲ್ಲಿ ಕ್ಯಾನ್ಸರ್ ಕುರಿತು ಜನರಿಗೆ ಹೆಚ್ಚು ಮಾಹಿತಿ ಹಾಗೂ ಅರಿವನ್ನು ಮೂಡಿಸುವಂತಹ ಕಾರ್ಯ ಮಾಡಬೇಕು ಎಂದು ತಿಳಿಸಿದರು. ಈ ತರಬೇತಿಯಲ್ಲಿ ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾ॥ವಿಕ್ಟರ್ ವಾಸ್, ಸಹ ನಿರ್ದೇಶಕರಾದ ಫಾ॥ವಿಜಯ್ ಕುಮಾರ್ , ಕಾರ್ಯಕ್ರಮಗಳ ವ್ಯವಸ್ಥಾಪಕರಾದ ಸಿಸ್ಟರ್ ವಿಲ್ಮಾಮ್ಯಾಥ್ಯೂರವರು, ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಯ ಸಿಬ್ಬಂದಿ ವರ್ಗದವರು ಭಾಗವಹಿಸಿದರು.

## “ಸಮಾಜದಿಂದ ತಳ್ಳಲ್ಪಟ್ಟ ವೀಶಷ ಚೆತನರ ಸರ್ವೆಕಾರ್ಯ”



ಹುಮನಾಬಾದ್ ತಾಲೂಕಿನ ಘಾಟಬೋರಳ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಎಪಿಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರಿ ಹಣಮಂತ ಅವರು ದಿನಾಂಕ  09/05/2024 ರಂದು ಮಾನಸಿಕ ಅಸ್ವಸ್ಥರು ಹಾಗು ವಿಕಲಚೆತನರನ್ನು ಪತ್ತೆ ಹಚ್ಚುವ ಸರ್ವೆಕಾರ್ಯ ಮಾಡಿದರು. ಈ ಸರ್ವೆಕಾರ್ಯದಲ್ಲಿ 2 ಮಾನಸಿಕ ಅಸ್ವಸ್ಥರು, 5 ಅಂಗವಿಕರು  2 ಬುದ್ಧಿ ಮಾಂದ್ಯರು, 1 ಬೆಳವಣಿಗೆಯಲ್ಲಿ ಕುಂಠಿತವಿರುವ ಮಗುವನ್ನು ಪತ್ತೆ ಹಚ್ಚಲಾಗಿದೆ. ತಮ ಓಣಿಗಳಲ್ಲಿ ಹಾಗು ತಮ್ಮ ತಮ್ಮ ಸಂಬಂಧಿಕರ ಊರುಗಳಲ್ಲಿ ಮಾನಸಿಕ ಅಸ್ವಸ್ಥರು ಕಂಡು ಬಂದಲ್ಲಿ ಆರ್ಬಿಟ್ ಸಂಸ್ಥೆಯ ಹೆಲ್ಪ್ ಲೈನ್ ನಂಬರ್ 9036664271 ಗೆ ಕರೆ ಮಾಡಿ ಮಾಹಿತಿ ನಿಡುವಂತೆ ತಿಳಿಸಲಾಯಿತು.

# “ಮಹಿಳಾ ಸಬಲೀಕರಣ ಕಾರ್ಯಕ್ರಮ”

## “ಮಹಾಸಂಗದ ಪದಾಧಿಕಾರಿಗಳಿಗೆ ಸಂವಹನ ಕಲೆ ಮತ್ತು ಪರಿಣಾಮಕಾರಿ ಆಲಿಸುವಿಕೆ ಕುರಿತು ತರಬೇತಿ”

ದಿನಾಂಕ 13.4.2024 ರಂದು ಭಾಲ್ಕಿ ತಾಲೂಕಿನ ಸಿದ್ದೇಶ್ವರ ಗ್ರಾಮದ ಪ್ರೇಮಾಂಜಲಿ ಮಹಾಸಂಗದ ಪದಾಧಿಕಾರಿಗಳಿಗೆ ಸಂವಹನ ಕಲೆ ಮತ್ತು ಪರಿಣಾಮಕಾರಿ ಆಲಿಸುವಿಕೆ ಕುರಿತು ತರಬೇತಿ ಹಮ್ಮಿಕೊಳ್ಳಲಾಯಿತು. ಆರ್ಬಿಟ್ ಸಂಸ್ಥೆ ಯ ಮಹಿಳಾ ಸಬಲೀಕರಣ ಯೋಜನೆ ಕಾರ್ಯಕ್ರಮದ ಸಂಯೋಜಕರಾದ ಸಿಸ್ಟರ್ ಜೀವಲತಾರವರು ಸಂದೇಶ ವನು  ಗುಂಪಿನ ಸದಸ್ಯರಿಗೆ ಕಿವಿ ಯಿಂದ ಕಿವಿ ಗೆ ರವಾನಿಸಿವುದರ ಮೂಲಕ ಕೊನೆಯ ಸದಸ್ಯರ ತನಕ ಯಾವ ಸಂದೇಶ ತಲುಪುತ್ತದೆ ಎಂದು ತಿಳಿದುಕೊಂಡು, ಆ ವಿಷಯದ ಮೇಲೆ ವಿಮರ್ಶಿಸುತಾ ಸಂವಹನ ಎಂದರೆ ಅನಿಸಿಕೆ, ಭಾವನೆಗಳನ್ನು ವ್ಯಕ್ತಪಡಿಸುವುದು ಹಾಗೂ ವಿಷಯವು ಮತ್ತೊಬ್ಬರಿಗೆ ಸ್ಪಷ್ಟವಾಗಿ ಮನಗ್ ಮುಟ್ಟುವಂತೆ ತಿಳಿ ಹೇಳುವುದಾಗಿದೆ ಎಂದು ಚಟುವಟಿಕೆ ಮೂಲಕ ಸಂಕ್ಷಿಪ್ತವಾಗಿ ವಿವರಿಸಿದರು. ಈ ತರಬೇತಿಯಲಿ ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕರು,  ಕಾರ್ಯಕರ್ತರು ಹಾಗೂ ಮಹಾಸಂಗದ ಪದಾಧಿಕಾರಿಗಳು ಭಾಗವಹಿಸಿ ಸಂವಹನ ಕಲೆ ಮತ್ತು ಪರಿಣಾಮಕಾರಿ ಆಲಿಸುವಿಕೆಯ ಕುರಿತು ತರಬೇತಿಯನ್ನು ಪಡೆದುಕೊಂಡಿದರು.






## “ಮಹಿಳಾ  ಹಕ್ಕುಗಳ ಕುರಿತು ತರಬೇತಿ”



ಏಪ್ರಿಲ್ 16 ರಂದು ಗೌರ ಗ್ರಾಮದಲ್ಲಿ ಮಹಿಳಾ  ಹಕ್ಕುಗಳ ಕುರಿತು ತರಬೇತಿ ನೀಡಲಾಯಿತು. ಮಹಿಳೆಯರಿಗೂ ಸಮಾಜದಲ್ಲಿ ಸಮಾನತೆಯಿಂದ ಬದುಕುವ ಹಕ್ಕಿದೆ. ಸಂವಿಧಾನವು ಮಹಿಳೆಯರಿಗಾಗಿ ಹಲವಾರು ಹಕ್ಕುಗಳನ್ನು ನೀಡಿದೆ ಈ ಹಕ್ಕುಗಳ ಪ್ರಯೋಜನವು ಪ್ರತಿ ಮಹಿಳೆಯೂ ಅನುಭವಿಸಬೇಕು.ಇಂದಿನ ಯುಗದಲ್ಲಿ ಮಹಿಳೆಯರು ಸುಶಿಕ್ಷಿತ ವಾಗುವ ಮೂಲಕ ಕಾನೂನಿನ ಅರಿವು ಹೊಂದುವುದು ತುಂಬಾ ಅವಶ್ಯಕ ಎಂದು ತಿಳಿಸಿದರು. ಮಹಿಳೆಯು ತನಗಾಗುವ ದೌರ್ಜನ್ಯದ ಕುರಿತು ಧ್ವನಿ ಎತ್ತಬೇಕು ಪ್ರತಿಭಟಿಸಬೇಕು ಹಾಗೂ ಮತ್ತೊಬ್ಬ ಮಹಿಳೆಯ ಮೇಲೆ ದೌರ್ಜನ್ಯವಾಗುತ್ತಿರುವುದು ಕಂಡುಬಂದಲ್ಲಿ ಸಮುದಾಯದವರು ಒಟ್ಟುಗೂಡಿ ಮಹಿಳೆಯ ಪರವಾಗಿ ನಿಲ್ಲಬೇಕು ಹಾಗೂ ಹಾಗೂ ಕಾನೂನಿನ ನೆರವು ಪಡೆಯಬೇಕು.ಅವರು ಕೇಳದೆ ಇದ್ದ ಸಂದರ್ಭದಲ್ಲಿ ಮೇಲಾಧಿಕಾರಿಗಳಿಗೆ ತಿಳಿಸಿ ನಮ್ಮ ಹಕ್ಕನ್ನು ನಾವು ಪಡೆದುಕೊಳ್ಳಲೇಬೇಕು.ವಿಶೇಷವಾಗಿ ಮಹಿಳೆಯರು ಆರ್ಥಿಕ ಸಬಲೀಕರಣವನ್ನು ಸಾಧಿಸಬೇಕು ಹಾಗಾಗಿ ಚಿಕ್ಕ ಉದ್ಯಮದಲ್ಲಿ ತಮ್ಮನ್ನು ತೊಡಗಿಸಿಕೊಂಡು ಆರ್ಥಿಕವಾಗಿ ಸ್ವಾತಂತ್ರ್ಯ ಹೊಂದಬೇಕು ಎಂದು ತಿಳಿಸಲಾಯಿತು.ಈ ಒಂದು ತರಬೇತಿಯಲ್ಲಿ ಒಟ್ಟು 19 ಜನ ಭಾಗವಹಿಸಿ ಮಾಹಿತಿ ಪಡೆದುಕೊಂಡರು ಹಾಗೂ ಎಂಟು ಜನರು ನಾವೆಲ್ಲರೂ ಒಗ್ಗಟ್ಟಿನಿಂದ ಜೀವಿಸುತ್ತೇವೆ, ಪರಸ್ಪರ ಕಷ್ಟ ಸುಖಗಳಿಗೆ ನೆರವಾಗುತ್ತೆ ಎಂದು ತಿಳಿಸಿದರು.



## “ಕೌಶಲ್ಯ ಅಭಿವೃದ್ಧಿ ತರಬೇತಿ ಕೈಗಾರಿಕಾ ಇಲಾಖೆಯಿಂದಉಚಿತ ಟೈಲರಿಂಗ್ ಮಷೀನ್”

ಹುಮ್ನಾಬಾದ್ ತಾಲೂಕಿನ ಹಿಲಾಲ್ಪುರ್ ಗ್ರಾಮದಲ್ಲಿ 2022 ರಲ್ಲಿ ಆರ್ಬಿಟ್ ಸಂಸ್ಥೆಯ ವತಿಯಿಂದ ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಟೈಲರಿಂಗ್ ತರಬೇತಿಯಲ್ಲಿ ಸುಮಾರು 12 ಜನ ಶಿಬಿರಾರ್ಥಿಗಳು ಭಾಗವಹಿಸಿದರು. ಕುಮಾರಿ ಅನ್ನಪೂರ್ಣ ತಂದೆ ರೇವಣಸಿದ್ದಪ್ಪ ಇವರು ತರಬೇತಿಯನ್ನು ಪಡೆದುಕೊಂಡು ತಮ್ಮ ಕುಟುಂಬ ಆರ್ಥಿಕ ಪರಿಸ್ಥಿತಿಯನ್ನು ನಿಭಾಯಿಸಲು ಕೆಲಸ ಮಾಡಬೇಕಾದ ಪರಿಸ್ಥಿತಿ ಉಂಟಾಯಿತು. ಅದೇ ಸಂದರ್ಭದಲ್ಲಿ ತರಬೇತಿ ಪಡೆದು ಆರ್ಬಿಟ್ ಸಂಸ್ಥೆಯಿಂದ ಮಾಹಿತಿಯನ್ನು ಪಡೆದುಕೊಂಡು ಅರ್ಜಿ ಸಲ್ಲಿಸಿದ ಪರಿಣಾಮವಾಗಿ ಕೈಗಾರಿಕಾ ಇಲಾಖೆಯಿಂದ ಇವರಿಗೆ ಉಚಿತ ಟೈಲರಿಂಗ್ ಮಷೀನ್ ಒದಗಿಸಿಕೊಡಲಾಗಿದೆ. ಇವರು ಬ್ಲೌಸ್ ಮತ್ತು ಡ್ರೆಸ್ ಹೊಲಿಯುವುದರ ಮೂಲಕ ಸ್ವಾವಲಂಬಿ ಜೀವನ ನಡೆಸುತ್ತಿದ್ದಾರೆ. ತರಬೇತಿಯನ್ನು ಪಡೆದುಕೊಳ್ಳಲು ಸಹಾಯ ಮಾಡಿದ ಆರ್ಬಿಟ್ ಸಂಸ್ಥೆಗೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

## “ಸ್ವ–ಉದ್ದಿಮೆ ಕುರಿತು ತರಬೇತಿ”



ಏಪ್ರಿಲ್ 16 ರಂದು ಚಿಟ್ಟಗುಪ್ಪಾ ಪಟ್ಟಣದ ಭಾಸ್ಕರ್ ನಗರದಲ್ಲಿ ಕಮಲ ಮಹಾಸಂಗದ ಸದಸ್ಯರಿಗೆ ಸ್ವಉದ್ದಿಮೆ ಕುರಿತು ತರಬೇತಿಯನ್ನು ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತೆಯಾದ ಶ್ರೀಮತಿ ರೀಟ ರವರು ತರಬೇತಿಯನ್ನು ಹಮ್ಮಿಕೊಂಡಿದ್ದರು. ಈ ತರಬೇತಿಯಲ್ಲಿ ಬ್ರದರ್ ಮನೋಜ್ ಅವರು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಮಹಿಳೆಯರಿಗೆ ಮೇಣದಬತ್ತಿ ತಯಾರಿಕೆ, ಚಾಪೆ ನೇಯುವದು, ಬುಟ್ಟಿ ಹೆಣೆಯುವುದು, ಹೀಗೆ ಹಲವಾರು ಉದ್ದಿಮೆಗಳನ್ನು ಮಾಡಬಹುದು ಎಂದು ಮಾಹಿತಿ ನೀಡಿದರು. ಇತರಬೇತಿಯಲ್ಲಿ 15 ಮಹಿಳೆಯರು ಭಾಗವಹಿಸಿ ವಿವಿಧ ಕಿರು ಉದ್ದಿಮೆಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಂಡರು.

## “ಸಂವಿಧಾನದ ಹಕ್ಕುಗಳ ಕುರಿತುತರಬೇತಿ”



ಏಪ್ರಿಲ್ 22 ರಂದು ಭಾತಂಬ್ರಾ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಸಮಾಜ ಸೇವಾ ಕಾರ್ಯಕರ್ತೆಯಾದ ಶ್ರೀಮತಿ ಸುಜಾತ ರವರು ಸಂವಿಧಾನದ ಅರಿವು ತರಬೇತಿಯನ್ನು ಆಯೋಜಿಸಿದರು. ತರಬೇತಿಯ ಸಂಪನ್ಮೂಲ ವ್ಯಕ್ತಿಯಾದ  ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತೆಯಾದ ಕುಮಾರಿ ಅಶ್ವಿನಿ ರವರು  ಮಾಹಿತಿ ನೀಡಿದರು. ಸಂವಿಧಾನ ಮತ್ತು ಸಂವಿಧಾನದ ಹಕ್ಕುಗಳಾದ  1) ಸಮಾನತೆಯ ಹಕ್ಕು 2) ಸ್ವತಂತ್ರದ ಹಕ್ಕು 3) ಧಾರ್ಮಿಕ ಸ್ವತಂತ್ರದ ಹಕ್ಕು  4) ಶೋಷಣೆಯ ವಿರುದ್ಧ ಹಕ್ಕು 5) ಸಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು 6) ಸಂವಿಧಾನದ ಪರಿಹಾರ ಹಕ್ಕುಗಳ ಕುರಿತು ಸಂಪೂರ್ಣವಾಗಿ ಮಾಹಿತಿಯನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ 57 ಜನ ಭಾಗವಹಿಸಿ ಸಂವಿಧಾನದ ಹಾಗೂ ಸಂವಿಧಾನದ ಹಕ್ಕುಗಳ ಕುರಿತು ಮಾಹಿತಿ ಪಡೆದುಕೊಂಡರು.

## “ವಿವಿಧ ಇಲಾಖೆಗಳಿಂದ ಸಿಗುವ ಸೌಲಭ್ಯಗಳ ಕುರಿತು ತರಬೇತಿ – ಸಿಸಿ ರಸ್ತೆ ನಿರ್ಮಾಣ”



ಹುಮ್ನಾಬಾದ್ ತಾಲೂಕಿನ ಹಿಲಾಲ್ ಪುರ್ ಗ್ರಾಮದಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ ಗುಂಪನ್ನು 2023 ರಲ್ಲಿ ಕಟ್ಟಲಾಗಿತ್ತು. ಆರ್ಬಿಟ್ ಸಂಸ್ಥೆ ಕಾರ್ಯಕರ್ತರಾದ ಶ್ರೀಮತಿ ಅಮಿತಾ ಹಳ್ಳಿಗೆ ಭೇಟಿ ನೀಡುತ್ತಿದ್ದರು. ಪ್ರತಿ ತಿಂಗಳ ಸಭೆಯಲ್ಲಿ ವಿವಿಧ ಇಲಾಖೆಯಿಂದ ಸಿಗುವ ಸೌಲಭ್ಯಗಳ ಕುರಿತು ತರಬೇತಿಯನ್ನು ನೀಡುವುದರ ಜೊತೆಗೆ ಅಧಿಕಾರಿಗಳೊಂದಿಗೆ ಹೇಗೆ ದೈರ್ಯದಿಂದ, ಆತ್ಮ ಸ್ಥೈರ್ಯದಿಂದ ಮಾತನಾಡುವುದು ಎನ್ನುವ ಕೌಶಲ್ಯವನ್ನು ಕಲಿಸಲಾಯಿತು. ಹೀಗೆ ಹಲವು ತರಬೇತಿಗಳನ್ನು ಪಡೆದುಕೊಂಡ ಗುಂಪಿನ ಸದಸ್ಯರು ಧೈರ್ಯ ಹಾಗೂ ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡರು.ತಮ್ಮ ಓಣಿಯಲ್ಲಿ ಇರುವ ಸಿಸಿ ರಸ್ತೆಯ ಸಮಸ್ಯೆಯ ಕುರಿತು ಗುಂಪಿನಲ್ಲಿ ಚರ್ಚೆ ಮಾಡಿ 2023ರಲ್ಲಿ ಗ್ರಾಮ ಪಂಚಾಯಿತಿಗೆ ಅರ್ಜಿಯನ್ನು ಸಲ್ಲಿಸಿದರು. ಅರ್ಜಿ ಸಲ್ಲಿಸಿದ ಪರಿಣಾಮವಾಗಿ 2024 ಜನವರಿ ತಿಂಗಳಲ್ಲಿ ಹಿಲಾಲ್ಪುರ್ ಹಳ್ಳಿಯ ಎಂ.ಜಿ.ಎನ್.ಆರ್.ಇ.ಜಿ.ಎ ಗುಂಪಿನ ಸದಸ್ಯರ ಓಣಿಯಲ್ಲಿ ಸಿಸಿ ರಸ್ತೆ ನಿರ್ಮಾಣಗೊಂಡಿದೆ.ಸಿಸಿ ರಸ್ತೆಯನ್ನು ನಿರ್ಮಿಸಿಕೊಳ್ಳಲು ಮಾರ್ಗದರ್ಶನ ನೀಡಿದ ಆರ್ಬಿಟ್ ಸಂಸ್ಥೆಗೆ ನಮ್ಮ ಗುಂಪಿನ ಪರವಾಗಿ ಹಾಗೂ ಹಳ್ಳಿಯ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು ಸಲ್ಲಿಸಿದ್ದಾರೆ.

## “ಮನೆಯ ಅಂಗಳದಲ್ಲಿ ಕೈತೋಟ ನಿರ್ಮಾಣ”



ಕಲಾವತಿ ಗಂಡ ಈಶ್ವರ್ ಇವರು ಹುಮ್ನಾಬಾದ್ ತಾಲೂಕಿನ ಕಪ್ಪರಗಾವ್ ಗ್ರಾಮದಲ್ಲಿ ವಾಸವಾಗಿರುತ್ತಾರೆ. ಇವರು ಆರ್ಬಿಟ್ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಸುಮಾರು 25 ವರ್ಷಗಳಿಂದ ನೆಹರು ಮಹಿಳಾ ಸ್ವಸಹಾಯ ಸಂಘದ ಸದಸ್ಯರಾಗಿದ್ದು, ಸಂಸ್ಥೆಯು ನೀಡುವ ಅನೇಕ ತರಬೇತಿಗಳನ್ನು ಪಡೆದುಕೊಂಡಿದ್ದಾರೆ. ವಿಶೇಷವಾಗಿ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ನಾನು ಮತ್ತು ನಮ್ಮ ಕುಟುಂಬದವರು ರಾಸಾಯನಿಕ ಗೊಬ್ಬರದಿಂದ ಬೆಳೆಸಿದ ತರಕಾರಿಯ ಸೇವನೆ ಮಾಡುವುದರಿಂದ ಆರೋಗ್ಯ ಹಾಳಾಗುತ್ತದೆ ಎಂದು ಅರಿತುಕೊಂಡರು.ತಮ್ಮ ಮನೆಯ ಅಂಗಳದಲ್ಲಿ ಕೈತೋಟವನ್ನು ನಿರ್ಮಿಸಿ ಜೈವಿಕ ಗೊಬ್ಬರದಿಂದ ಬೆಳೆಸಿದ ಹಸಿ ತರಕಾರಿಯನ್ನು ಸೇವನೆ ಮಾಡುತ್ತಿದ್ದಾರೆ.ಆರ್ಬಿಟ್ ಸಂಸ್ಥೆಯ ಮಾರ್ಗದರ್ಶನದ ಮೇರೆಗೆ ಕೈತೋಟ ನಿರ್ಮಾಣ ಮಾಡಿ ನಾನು ಮತ್ತು ನನ್ನ ಕುಟುಂಬದವರು ಒಳ್ಳೆಯ ಆಹಾರವನ್ನು ಸೇವನೆ ಮಾಡುತ್ತಿದ್ದೇವೆ ಇದರಿಂದ ನಮ್ಮ ಕುಟುಂಬದವರ ಆರೋಗ್ಯದಲ್ಲಿ ತುಂಬಾ ಸುಧಾರಣೆ ಕಂಡು ಬಂದಿದೆ.ಇದರ ಕುರಿತು ಸೂಕ್ತ ಮಾರ್ಗದರ್ಶನ ನೀಡಿದ ಆರ್ಬಿಟ್ ಸಂಸ್ಥೆಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.





# “ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”

## “ನೀರನ್ನು ಸಂರಕ್ಷಣೆ ಮಾಡಿ”



ಏಪ್ರಿಲ್ 3 2024 ರಂದು ಹುಮ್ನಾಬಾದ್ ತಾಲೂಕಿನ ಜಾಮ್ ನಗರದಲ್ಲಿ ನೀರಿನ ಸಂರಕ್ಷಣೆ ಕುರಿತು ಶೀಘ್ರ ಪತ್ತೆ ಹಚ್ಚುವಿಕ ಆರಂಭಿಕ ಶಿಕ್ಷಣದ ಕಾರ್ಯಕರ್ತರಾದ ಶ್ರೀ ಸೂರ್ಯಕಾಂತ್ ಅವರು ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಈ ಜಾಗೃತಿ ಕಾರ್ಯಕ್ರಮದಲ್ಲಿ 20 ಜನ ಕೂಲಿಕಾರ್ಮಿಕರು ಭಾಗವಹಿಸಿದ್ದರು. ಬೇಸಿಗೆ ಪ್ರಾರಂಭವಾಗಿದೆ ನೀರನ್ನು ಮಿತವಾಗಿ ಬಳಸಬೇಕು ಜೊತೆಗೆ ನೀರಿನ ಸಂರಕ್ಷಣೆ ಮಾಡಬೇಕು. ಅತಿಯಾದ ಬಿಸಿಲಿನಿಂದ ಅಂತರ್ಜಲದ ಮಟ್ಟ ಕಡಿಮೆಯಾಗಿದೆ, ಮುಂದಿನ ಪೀಳಿಗೆಗಳಿಗಾಗಿ ನೀರನ್ನು ಸಂರಕ್ಷಣೆ ಮಾಡುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಾಗಿದೆ. ಪ್ರಾಣಿ ಪಕ್ಷಿಗಳು ಮತ್ತು ಸಸ್ಯ ಸಂಕುಲಗಳಿಗೆ ನೀರು ಅತ್ಯವಶ್ಯಕ ವಾಗಿರುವುದರಿಂದ ಎಲ್ಲರು ನೀರನ್ನು ಸಂರಕ್ಷಣೆ ಮಾಡುವ ಜವಾಬ್ದಾರಿ ತೆಗೆದುಕೊಳ್ಳಬೇಕು. ದಿನದಿಂದ ದಿನಕ್ಕೆ ಬಿಸಿಲಿನ ತಾಪ ಏರಿಕೆ ಕಾಣಿಸಿಕೊಳ್ಳುತ್ತಿದೆ ಇದು ಅಪಾಯದ ಮುನ್ಸೂಚನೆ ಇದರಿಂದ ಸನ್ ಸ್ಟ್ರೋಕ್ ಹಿಟ್ ಸ್ಟ್ರೋಕ್ ಆಗುವ ಸಾಧ್ಯತೆಗಳು ಇರುತ್ತವೆ. ದೇಹದಲ್ಲಿ ಸೋಡಿಯಂ ಮತ್ತು ಪೋಟೋಸಿಯಂ ಅಂಶ ಕಡಿಮೆಯಾಗಿ ಏರಿಳಿತ ಕಂಡು ದೇಹ ನಿತ್ರಾಣಕ್ಕೆ ಬರುತ್ತದೆ. ರಕ್ತದ ಒತ್ತಡ ಇಳಿಕೆಯಾಗುತ್ತದೆ. ಆದ್ದರಿಂದ ಈ ಬೇಸಿಗೆ ಸಮಯದಲ್ಲಿ ನಾಗರಿಕರು ಅತಿ ಜಾಗರುಕತೆಯಿಂದ ಇರಬೇಕು ಎಂದು ಕರೆ ನೀಡಲಾಯಿತು.

## 0–6 ವರ್ಷದ ಮಕ್ಕಳ ಬೆಳವಣಿಗೆಯ ಮೈಲಿಗಲ್ಲುಗಳು



ಏಪ್ರಿಲ್ 5 ರಂದು ಹುಮ್ನಾಬಾದ್ ತಾಲೂಕಿನ ದುಬಲಗುಂಡಿ ವಲಯದ ಅಂಗನವಾಡಿ ಕಾರ್ಯಕರ್ತರಿಗೆ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕ್ರಮದ ಕಾರ್ಯಕರ್ತೆ ಶ್ರೀಮತಿ ಮಮತಾರವರು ಮಕ್ಕಳ ಬೆಳವಣಿಗೆಯ ಮೈಲುಗಲ್ಲುಗಳ ಕುರಿತು ವಿವರಿಸಿದರು. ಮಕ್ಕಳು 0 ರಿಂದ 3 ತಿಂಗಳಲ್ಲಿ ತಲೆ ಮತ್ತು ಎದೆಯ ಮೇಲಿನ ಭಾಗವನ್ನು ಎತ್ತುವುದು, ಕೈ ಮತ್ತು ಕಾಲುಗಳನ್ನು ಚಲಿಸುವುದು, ಹಸಿವಾದಗ ಅಳುವುದು, 4 ರಿಂದ 6 ತಿಂಗಳಲ್ಲಿ ಎರಡು ಕಡೆ ಹೊರಳಾಡುವುದು, ತಲೆ ಮತ್ತು ಎದೆಯ ಮೇಲಿನ ಭಾಗವನ್ನು ಎತ್ತುವುದು, ಹಸ್ತವನ್ನು ಚಾಚಿ ವಸ್ತುಗಳನ್ನು ಹಿಡಿದುಕೊಳ್ಳುವುದು. 7ರಿಂದ 9 ತಿಂಗಳವರೆಗೆ ಅಂಬೆಗಾಲಿಡುವುದು, ಸಣ್ಣ ವಸ್ತುಗಳನ್ನು ಎತ್ತಿಕೊಳ್ಳುವುದು, ತಾಯಿಯನ್ನು ಅನುಕರಿಸುವುದು. 10ರಿಂದ 12 ತಿಂಗಳಲ್ಲಿ ಮಂಡಿಗಾಲಿನಲ್ಲಿ ನಿಂತು ವಸ್ತುಗಳಿರುವ ಕಡೆ ತಲುಪುವುದು, ಒಂದು ಶಬ್ದದ ಮೂಲಕ ಮಾತನಾಡಲು ಪ್ರಯತ್ನಿಸುವುದು. 1 ರಿಂದ 2 ವರ್ಷಗಳಲ್ಲಿ ವಿವಿಧ ಬಣ್ಣಗಳನ್ನು ಗುರುತಿಸುವುದು ಸರಳ ಹಾಡುಗಳನ್ನು ಕೇಳಿಸಿಕೊಳ್ಳುತ ಹಾಡುವುದು, ಸೂಚನೆಗಳನ್ನು ಪಾಲಿಸುವುದು. 2 ರಿಂದ 3 ವರ್ಷಗಳಲ್ಲಿ ಒಂದು ಅಡಿ ಎತ್ತರದಿಂದ ಜಿಗಿಯುವುದು ಓಡುವುದು ವಸ್ತುಗಳನ್ನು ವಿಂಗಡಿಸುವುದು ಸರಳ ವಾಕ್ಯಗಳನ್ನು ಮಾತನಾಡುವುದು. 3 ರಿಂದ 4 ವರ್ಷಗಳಲ್ಲಿ ಬಾಲನ್ನು ಎಸೆಯುವುದು ಮತ್ತು ಹಿಡಿಯುವುದು ಜಿಗಿಯುವುದು. 4 ರಿಂದ 6 ವರ್ಷಗಳಲ್ಲಿ ಸ್ನಾನ ಮಾಡುವುದು, ಮೂಲ ಗಣಿತವನ್ನು ತಿಳಿಯುವುದು ಉದಾಹರಣೆಗೆ ನನಗೆ ಎರಡು ಬಾಳೆಹಣ್ಣುಗಳನ್ನು ಕೊಡು ಎನ್ನುವದು ಈ ರೀತಿ ಮಕ್ಕಳಲ್ಲಿ ಬೆಳವಣಿಗೆಯನ್ನು ಕಾಣುತ್ತೇವೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 36 ಜನ ಭಾಗವಹಿಸಿ ಕಾರ್ಯಕ್ರಮದ ಸದುಉಪಯೋಗ ಪಡೆದುಕೊಂಡರು.

## “ಬೆಳವಣಿಯಲ್ಲಿ ಕುಂಠಿತ ಹೊಂದಿರುವ ಮಕ್ಕಳ ಪೋಷಕರಿಗೆ ಆಪ್ತ ಸಮಾಲೋಚನೆ”



ಏಪ್ರಿಲ್ 26 2024 ರಂದು ಹುಮ್ನಾಬಾದ್ ತಾಲೂಕಿನ ಸೇಡೋಳ್ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ಕವಿತಾ ರವರು ಬೆಳವಣಿಯಲ್ಲಿ ಕುಂಠಿತ ಹೊಂದಿರುವ 0 ದಿಂದ 8 ವರ್ಷದ ಒಳಗಡೆ ಇರುವ ಮಕ್ಕಳನ್ನು, ಅಂಗನವಾಡಿ ಹಾಗು ಆಶಾ ಕಾರ್ಯಕರ್ತರ ಸಹಕಾರದಿಂದ ಮಕ್ಕಳನ್ನು ಪತ್ತೆ ಹಚ್ಚಿ, ಮನೆಗೆ ಭೇಟಿಮಾಡಿ, ಪೋಷಕರಿಗೆ ಆಪ್ತ ಸಮಾಲೋಚನೆ ಮಾಡುವ ಮುಲಕ ಮಗುವಿನ ನ್ಯೂನತೆಯನ್ನು ಕಂಡುಹಿಡಿದು, ಅಸೇಸಮೆಂಟ್ ಮಾಡಿ, ತಿಂಗಳಲ್ಲಿ ಎರಡು ಸಲ ಮಗುವಿಗೆ ಚಟುವಟಿಕೆ ಮಾಡಿಸುವ ಮುಲಕ ಮಕ್ಕಳಲ್ಲಿ ಬದಲಾವಣೆ ತರುವ ’ಕಾರ್ಯ ಮಾಡಲಾಗುತ್ತಿದೆ. ಸರಕಾರದಿಂದ ಸಿಗುವಂತಹ ಸೌಲಭ್ಯಗಳ ಬಗ್ಗೆ ಪೋಷಕರಿಗೆ ಮಾಹಿತಿ ನಿಡಲಾಗಿದೆ. ಯು.ಡಿ.ಐ.ಡಿ ಕಾರ್ಡ್, ನಿರಾಮಯ ಕಾರ್ಡ್, ಆಧಾರ್ ಕಾರ್ಡ್ ಮಾಡುವ ಕುರಿತು ಪೋಷಕರಿಗೆ ಮಾಹಿತಿ ನಿಡಲಾಯಿತು. ಈ ಕಾರ್ಯಕ್ರಮದಲ್ಲಿ 20 ಜನರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

# "ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮ"

## "ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮ"




ಏಪ್ರಿಲ್ 12 ರಂದು ಬಸವಕಲ್ಯಾಣ ತಾಲೂಕಿನ ನಾರಾಯಣಪುರ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಅರ್ಬಿಟ್ ಸಂಸ್ಥೆ ಮತ್ತು ನವ ಜೀವನ್ ಎಲ್.ಎಲ್.ಎಲ್.ಎಫ್ ಸಂಯುಕ್ತ ಆಶ್ರಯದಲ್ಲಿ ಅಂಗನವಾಡಿ ಮಕ್ಕಳ ತಾಯಂದಿರಿಗೆ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯ ಕರ್ತೆಯಾದ ಶ್ರೀಮತಿ ಸುಜಾತ ರವರು ಸಭೆಯನ್ನು ಉದ್ದೇಶಿಸಿ ಮಾತನಾಡಿ ಮಾನಸಿಕ ಆರೋಗ್ಯ, ಮಾನಸಿಕ ಕಾಯಿಲೆಯ ಲಕ್ಷಣಗಳು ಮತ್ತು ಮಾನಸಿಕ ಕಾಯಿಲೆ ಹೇಗೆ ಬರುತ್ತದೆ ಎಂಬ ಕಾರಣಗಳನ್ನು ತಿಳಿಸಿ, ಮಾನಸಿಕ ಅಸ್ವಸ್ಥರನ್ನು ಪ್ರಥಮ ಹಂತದಲ್ಲಿ ಪತ್ತೆ ಹಚ್ಚಿ ಅವರನ್ನು ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಉಚಿತವಾದ ತಪಾಸಣೆ ಮತ್ತು ಚಿಕಿತ್ಸೆ ಕೊಡಿಸುವ ಮೂಲಕ ಸಮಾಜದ ಮುಖ್ಯ ವಾಹಿನಿಗೆ ತಂದು ಪುನರ್ವಸತಿ ಕಲ್ಪಿಸುವುದೆ, ಈ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು. ಈ ಕಾರ್ಯ ಕ್ರಮದಲ್ಲಿ ಬಹು ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿ ಮಾಹಿತಿ ಪಡೆದು ಕೊಂಡರು.




ಏಪ್ರಿಲ್ 22 ರಂದು ಬಸವಕಲ್ಯಾಣ ತಾಲೂಕಿನ ನಾರಾಯಣಪುರ ಗ್ರಾಮ ಪಂಚಾಯತ್ ವ್ಯಾಪ್ತಿಯ ಗುಣತೀರ್ಥ ವಾಡಿ ಗ್ರಾಮದ ನರೇಗಾ ಯೋಜನೆಯ ಅಡಿಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರಿಗೆ ಆರ್ಬಿಟ್ ಸಂಸ್ಥೆ ಹಾಗೂ ಎಲ್.ಎಲ್.ಎಲ್.ಎಫ್ ಕಾರ್ಯ ಕ್ರಮದ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯ ಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀಮತಿ ಸುಜಾತ ಭಾಗವಹಿಸಿದರು. ಮಾನಸಿಕ ಆರೋಗ್ಯ, ಮಾನಸಿಕ ಕಾಯಿಲೆಯ ಲಕ್ಷಣಗಳು, ಮಾನಸಿಕ ಕಾಯಿಲೆಗೆ ಇರುವ ಕಾರಣಗಳು, ಮಾನಸಿಕ ಕಾಯಿಲೆಗೆ ಇರುವ ಸೂಕ್ತ ಚಿಕಿತ್ಸೆ ಮತ್ತು ಮಾನಸಿಕ ಕಾಯಿಲೆಯ ಬಗ್ಗೆ ಜನರಲ್ಲಿರುವ ತಪ್ಪು ಕಲ್ಪನೆಗಳ ಕುರಿತಾಗಿ ಮಾಹಿತಿ ನೀಡಿದರು. ನಿಮ್ಮ ಹಳ್ಳಿಯಲ್ಲಿ ಮಾನಸಿಕ ಅಸ್ವಸ್ಥತೆಯಿಂದ ಬಳಲುತಿರುವ ವ್ಯಕ್ತಿಯು ಕಂಡುಬಂದಲ್ಲಿ ಆರ್ಬಿಟ್ ಸಂಸ್ಥೆಯ ಸಹಾಯವಾಣಿ ಸಂಖ್ಯೆಗೆ ಕರೆಮಾಡಿ ಮಾಹಿತಿ ಪಡೆದು ಕೊಳ್ಳಬಹುದು ಎಂದು ತಿಳಿಸಿದರು. ಜೊತೆಗೆ ಕ್ಯಾನ್ಸರ್ ರೋಗದ ಕುರಿತು ಅರಿವು ಮೂಡಿಸಲಾಯಿತು ಹಾಗು ಮುಂಬರುವ ಲೋಕ ಸಭಾ ಚುನಾವಣೆಯಲ್ಲಿ ಕಡ್ಡಾಯವಾಗಿ ಪ್ರತಿಯೊಬ್ಬರು ಮತದಾನ ಮಾಡುವ ಮೂಲಕ ಪ್ರಜಾಪ್ರಭುತ್ವವನ್ನು ಬಲಪಡಿಸಬೇಕು ಎಂದು ತಿಳಿ ಹೇಳಲಾಯಿತು.



ಎಪ್ರಿಲ್ 08 ರಂದು ಭಾಲ್ಕಿ ತಾಲೂಕಿನ ಕಾಕನಾಳ ಗ್ರಾಮಸ್ಥರಿಗೆ ಅರಿವಿನ ಕಾರ್ಯಕ್ರಮದಡಿಯಲ್ಲಿ ಮಾನಸಿಕ ರೋಗ ಮತ್ತು ರೋಗದ ಲಕ್ಷಣ, ಮಾನಸಿಕ ರೋಗಕ್ಕೆ ಇರುವ ಚಿಕಿತ್ಸೆ, ಮಾನಸಿಕ ರೋಗದಲ್ಲಿ ವ್ಯಕ್ತಿಯ ವರ್ತನೆಯ ಬಗ್ಗೆ ತಿಳಿಸಲಾಯಿತು. ಮಮಾನಸಿಕ ಅಸ್ವಸ್ಥತೆಗೆ ಸಂಬಂಧಿಸಿದಂತೆ ಆರ್ಬಿಟ್ ಸಂಸ್ಥೆಯ ಸಹಾಯವಾಣಿಯ ಬಗ್ಗೆ ಮಾಹಿತಿಯನ್ನು ಒದಗಿಸಲಾಯಿತು.ತಮ್ಮ ಗ್ರಾಮದಲ್ಲಿ ಮಾನಸಿಕ ಅಸ್ವಸ್ಥರು ಕಂಡು ಬಂದರೆ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಿಗೆ ಮಾಹಿತಿ ನೀಡುವಂತೆ ಕೋರಲಾಯಿತು ಹಾಗೂ ಉಚಿತ ಸಹಾಯವಾಣಿಗೆ ಕರೆ ಮಾಡುವ ಮೂಲಕ ಸೂಕ್ತ ಮಾರ್ಗದರ್ಶನ ಪಡೆಯಬಹುದು ಎಂಬುದಾಗಿ ಮನವರಿಕೆ ಮಾಡಿಕೊಡಲಾಯಿತು. ಸರ್ಕಾರಿ ಸೌಲಭ್ಯಗಳನ್ನು ಪ್ರತಿಯೊಬ್ಬರು ಪಡೆದುಕೊಳ್ಳಬೇಕು, ವೋಟರ್ ಐಡಿಯನ್ನು ತಪ್ಪದೇ ಮಾಡಿಕೊಳ್ಳಬೇಕು ಮತ್ತು ಮತದಾನವನ್ನು ಕಡ್ಡಾಯವಾಗಿ ಚಲಾಯಿಸಬೇಕು, ಮತದಾನ ಪ್ರತಿಯೊಬ್ಬರ ಹಕ್ಕು ಮತ್ತು ಕರ್ತವ್ಯವಾಗಿದೆ ಎಂದು ಮನವರಿಕೆ ಮಾಡಿಕೊಡಲಾಯಿತು.ಸಂಸ್ಥೆಯ ಸಹಾಯವಾಣಿ ನಂಬರ್ ಅನ್ನು ಹಂಚಿಕೊಳ್ಳಲಾಯಿತು.



ಏಪ್ರಿಲ್ 05 ರಂದು ಔರಾದ್ ತಾಲ್ಲೂಕಿನ ಶೇಡ್ಗಪುರ್ ಗ್ರಾಮದ ಬಸವೇಶ್ವರ ಮಂದಿರ ದಲ್ಲಿ ಅರ್ಬಿಟ್ ಸಂಸ್ಥೆ ಮತ್ತು ಎಲ್.ಎಲ್. ಎಲ್.ಎಫ್ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಜಾಗ್ರತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಯೋಹನ ಉಪಸ್ಥಿತರಿದ್ದರು. ಮಾನಸಿಕ ಆರೋಗ್ಯ, ಮಾನಸಿಕ ಕಾಯಿಲೆ ಗುಣಲಕ್ಷಣಗಳು, ಮಾನಸಿಕ ಖಾಯಿಲೆಗೆ ಸಂಬಂಧಿಸಿದ ಚಿಕಿತ್ಸೆಯ ಬಗ್ಗೆ ಹಾಗೂ ಮತದಾನದ ಗುರುತಿನ ಚೀಟಿಯ ಬಗ್ಗೆ ಮಾಹಿತಿ ನೀಡಿದರು ಹಾಗೂ ಅರ್ಬಿಟ್ ಸಂಸ್ಥೆಯ ಮಾನಸಿಕ ಅಸ್ವಸ್ಥತೆಯ ಕಾರ್ಯಕ್ರಮದ ಸಹಾಯ ವಾಣಿ ಸಂಖ್ಯೆಯ ಕುರಿತು ಮಾಹಿತಿ ನೀಡಲಾಯಿತು. 18 ವರ್ಷ ತುಂಬಿದ ಪ್ರತಿಯೊಬ್ಬರು ಮತದಾರರ ನೋಂದಣಿ ಪಟ್ಟಿಯಲ್ಲಿ ಹೆಸರು ಸೇರಿಸುವ ಮೂಲಕ ಕಡ್ಡಾಯವಾಗಿ ಮತದಾನ ಮಾಡಿ ಎಂದು ಮತದಾನದ ಮಹತ್ವದ ಕುರಿತು ಅರಿವು ಮೂಡಿಸಲಾಯಿತು.ಈ ಕಾರ್ಯಕ್ರಮದಲ್ಲಿ ಬಹು ಸಂಖ್ಯೆಯಲ್ಲಿ ಗ್ರಾಮಸ್ಥರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

## "ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮ"



ಏಪ್ರಿಲ್ 25ರಂದು ಔರಾದ್ ತಾಲ್ಲೂಕಿನ ಖಾಶೆಂಪೂರ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಎಲ್.ಎಲ್.ಎಲ್.ಎಫ್ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ರಫಿಕ ರವರು ಮಾತನಾಡಿದರು. ಮಾನಸಿಕ ಆರೋಗ್ಯ, ಮಾನಸಿಕ ಕಾಯಿಲೆಯ ಗುಣಲಕ್ಷಣಗಳು, ಮಾನಸಿಕ ಖಾಯಿಲೆ ಸಂಬಂಧಿಸಿದ ಚಿಕಿತ್ಸೆ ಬಗ್ಗೆ ವಿವರವಾಗಿ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿ ವರ್ಗ ದವರು ಹಾಗು ಊರಿನ ಒಟ್ಟು 20 ಜನರು ಭಾಗವಹಿಸಿ ಮಾನಸಿಕ ಆರೋಗ್ಯದ ಕುರಿತು ಮಾಹಿತಿ ಪಡೆದುಕೊಂಡರು.



ಏಪ್ರಿಲ್ 24 ರಂದು ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ರಾಚಪ್ಪ ಗೌಡಗಾಂವ್ ಗ್ರಾಮದ ಬೌದ್ಧ ವಿಹಾರದಲ್ಲಿ ಆರ್ಬಿಟ್ ಸಂಸ್ಥೆ ಎಲ್.ಎಲ್.ಎಲ್.ಎಫ್ ಸಹಯೋಗದಲ್ಲಿ ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ ಏರ್ಪಡಿಸಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಅಮರ ಮಾನಸಿಕ ಅಸ್ವಸ್ಥರ ಕುರಿತು ಮಾಹಿತಿ ನೀಡಿದರು. ಮಾನಸಿಕ ಅಸ್ವಸ್ಥತೆ ಉಂಟಾಗಲು ಕಾರಣ, ಲಕ್ಷಣಗಳು ಅದಕ್ಕೆ ಇರುವ ಸೂಕ್ತ ಚಿಕಿತ್ಸೆಯ ಕುರಿತು ಸಂಪೂರ್ಣವಾಗಿ ವಿವರಿಸಿದರು. ಗ್ರಾಮದಲ್ಲಿರುವ ಮಾನಸಿಕ ಅಸ್ವಸ್ಥರನ್ನು ಗುರುತಿಸಿ ಮಾನಸಿಕ ಅಸ್ವಸ್ಥರ ಶಿಬಿರಕ್ಕೆ ಬರುವಂತೆ ಮನವೊಲಿಸುವುದು, ಮನೋವೈದ್ಯರಿಂದ ಸೂಕ್ತ ಹಾಗೂ ಉಚಿತ ಚಿಕಿತ್ಸೆ ಕೊಡಿಸುವದು, ಚಿಕಿತ್ಸೆಯ ನಂತರ ಅವರ ಮನೆ ಭೇಟಿ ಮಾಡಿ ಮಾತ್ರೆ ಪರೀಕ್ಷಿಸುವುದು ಹಾಗೂ ಅವರ ಮೂಲಭೂತ ಸೌಕರ್ಯಗಳಾದ ಸರಕಾರಿ ಯೋಜನೆ ಕುರಿತು ಮಾಹಿತಿ ಕೊಟ್ಟು ಅದರ ಲಾಭ ಫಲಾನುಭವಿಕೆ ದೊರೆಯುವಂತೆ ನೋಡಿಕೊಳ್ಳುವುದು, ಒಟ್ಟಾರೆಯಾಗಿ ಸಾಮಾನ್ಯ ವ್ಯಕ್ತಿಗೆ ದೊರಕುವ ಸ್ಥಾನಮಾನವನ್ನು ಚಿಕಿತ್ಸೆ ಮೂಲಕ ಗುಣಪಡಿಸಿ ಸಮಾಜಮುಖಿಯನ್ನಾಗಿ ಮಾಡುವುದು ಸಂಸ್ಥೆಯ ಉದ್ದೇಶವಾಗಿದೆ. ಈ ಕಾರ್ಯಕ್ರಮದಲ್ಲಿ ಗ್ರಾಮದ ಬಹುಸಂಖ್ಯಾತ ಜನರು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.



ಏಪ್ರಿಲ್ 25 ರಂದು, ಬಸವಕಲ್ಯಾಣ ತಾಲೂಕಿನ ತಡೋಳ ಗ್ರಾಮದ ಜನರಿಗೆ ಆರ್ಬಿಟ್ ಸಂಸ್ಥೆ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವಿಜಯಕುಮಾರ ಅವರು ಮಾತನಾಡಿ, ಮಾನಸಿಕ ಆರೋಗ್ಯ ಎಂದರೇನು? ಮಾನಸಿಕ ಕಾಯಿಲೆಯ ಲಕ್ಷಣಗಳು, ಮತ್ತು ಮಾನಸಿಕ ಕಾಯಿಲೆಗೆ ಕಾರಣ. ಪ್ರಥಮ ಹಂತದಲ್ಲಿ ಮಾನಸಿಕ ಕಾಯಿಲೆಗೆ ಒಳಗಾದ ವ್ಯಕ್ತಿಯನ್ನು ಪತ್ತೆ ಹಚ್ಚಿ ಅವರನ್ನು ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಉಚಿತವಾದ ತಪಾಸಣೆ ಮತ್ತು ಚಿಕಿತ್ಸೆಯ ಮೂಲಕ ಸ್ಪಂದಿಸಿ, ಸಮಾಜದ ಮುಖ್ಯ ವಾಹಿನಿಗೆ ತಂದು ಪುನರ್ವಸತಿ ಕಲ್ಪಿಸುವುದೆ, ಕಾರ್ಯಕ್ರಮದ ಉದ್ದೇಶವಾಗಿದೆ. ಲೋಕಸಭಾ ಸಾರ್ವತ್ರಿಕ ಚುನಾವಣೆಯು ನಡೆಯಲಿದ್ದು, ಪ್ರತಿಯೊಬ್ಬರು ಮತದಾನ ಮಾಡಿ ಪ್ರಜಾಪ್ರಭುತ್ವವನ್ನು, ಗಟ್ಟಿಗೊಳಿಸಬೇಕೆಂದು ಮಾಹಿತಿಯನ್ನು ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 24 ಜನರು ಭಾಗವಹಿಸಿದ್ದರು.



# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## “ಉಜ್ಜೀವನ ಕಾರ್ಯಕ್ರಮ”

## “ಸಮುದಾಯದ ಜನರಿಗೆ ಕಲಿಕಾ ಸಭೆ”



ದಿನಾಂಕ 15/04/2024 ಕಲಬುರಗಿ ಜಿಲ್ಲೆಯ ಪಾಣೆಗಾಂವ್ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆಯಿಂದ ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ನವೀನರವರು ಸಮುದಾಯದ ಜನರಿಗೆ ಕಲಿಕಾ ಸಭೆ ಆಯೋಜಿಸಲಾಯಿತ್ತು, ಕೃಷಿಯೇತರ ಗುಂಪು ಚಟುವಟಿಕೆಗಳ ಕುರಿತು ಜಾಗೃತಿಯನ್ನು ಮೂಡಿಸಿದರು. ಜನರು ವಲಸೆ ಹೋಗದೆ ಹಾಗೂ ಕೃಷಿಯ ಮೇಲೆ ಹೇಚ್ಚು ಅವಲಬಿಂತರಾಗದೆ, ಕರ್ನಾಟಕ ಸರಕಾರವು ಸ್ವಉದ್ಯೋಗ ಮಾಡಲು ಸಬ್ಸಿಡಿ ಮೂಲಕ ಲೋನ್‌ಗಳನ್ನು ನೀಡುವುದು ಈ ಉದ್ಯೋಗಕ್ಕೆ ಇಬ್ಬರು ಸದಸ್ಯರ ಅರ್ಜಿಗಳನ್ನು ಹಾಕಲಾಗಿದೆ ಜನರು ಮತು ್ಕೃಷಿಯೇತರ ಚಟುವಟಿಕೆಗಳಾದ ಅಣಬೆ ಬೇಸಾಯ. ಹೈನುಗಾರಿಕೆ. ಜೇನುಸಾಕಾಣಿಕೆ. ಕುರಿಸಾಕಾಣಿಕೆ ಹಾಗೂ ಯುವಕ ಯಿವತಿಯರಿಗೆ ಉಚಿತ ತರಬೇತಿಗಳೂ ಮುಂತಾದವುಗಳನ್ನು ಪಡೆಯುತಾ ತಮ್ಮ ಕೌಟುಂಬಿಕ ಸುಸ್ಥಿರ ಜೀವನೋಪಾಯಕೆ ಅನುಗುಣವಾಗಿ ಸ್ವಉದ್ಯೋಗವನ್ನು ರೂಪಿಸಿಕೋಳಬೇಕೇಂದು ತಿಳಿಸಿದರು.

## “ಅಗತ್ಯತೆಗೆ ಬೇಕಾದ ಸ್ಥಳೀಯ ಸಂಪನ್ಮಲ ಯೋಜನೆಗಳು”



ಮಾರ್ಚ್ 13.2024 ಕಲಬುರಗಿ ಜಿಲ್ಲೆಯ ಪಾಣೆಗಾಂವ್ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ನವೀನ್ ಸಮುದಾಯದ ಜನರಿಗೆ ಕಲಿಕಾ ಕಾರ್ಯಕ್ರಮ ಆಯೋಜಿಸಿದ್ದರು. ಕೃಷಿಯೇತರ ಗುಂಪು ಚಟುವಟಿಕೆಗಳ ಕುರಿತು ಜಾಗೃತಿಯನ್ನು ಮೂಡಿಸಿದರು. ಜನರು ವಲಸೆ ಹೋಗದೆ ಹಾಗೂ ಕೃಷಿಯ ಮೇಲೆ ಹೆಚ್ಚು ಅವಲಬಿಂತರಾಗದೆ. ಕರ್ನಾಟಕ ಸರಕಾರವು ಸ್ವ–ಉದ್ಯೋಗ ಮಾಡಲು ಹಲವಾರು ಕಾರ್ಯಕ್ರಮಗಳ ಮೂಲಕ ಸಬ್ಸಿಡಿ ಲೋನಗಳನ್ನು ನೀಡುತಿದ್ದು ಇದರ ಸದುಪಯೋಗ ಗ್ರಾಮದ ಜನರು ಪಡೆದುಕೊಳ್ಳುವಂತೆ ಮಾಹಿತಿ ನೀಡಿದರು. ಇದೆ ಸಂದರ್ಭದಲ್ಲಿ ಉದ್ಯೋಗಕ್ಕೆ ಇಬ್ಬರು ಸದಸ್ಯರುಗಳ ಅರ್ಜಿಗಳನ್ನು ಹಾಕಲಾಯಿತು. ಕೃಷಿಯೇತರ ಚಟುವಟಿಕೆಗಳಾದ ಅಣಬೆ ಬೇಸಾಯ, ಹೈನುಗಾರಿಕೆ ಜೇನು, ಸಾಕಾಣಿಕೆ, ಕುರಿಸಾಕಾಣಿಕೆ ಹಾಗೂ ಯುವಕ ಯುವತಿಯರಿಗೆ ಉಚಿತ ತರಬೇತಿಗಳು ಹೀಗೆ ಮುಂತಾದವುಗಳ ಸದುಪಯೋಗ ಪಡೆಯುತಾ ತಮ್ಮ ಕೌಟುಂಬಿಕ ಸುಸ್ಥಿರ ಜೀವನೋಪಾಯಕೆ ಅನುಗುಣವಾಗಿ ಸ್ವ–ಉದ್ಯೋಗವನ್ನು ರೂಪಿಸಿಕೋಳಬೇಕೇಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಗ್ರಾಮದ ಜನರು ಭಾಗವಹಿಸಿ ಮಾಹಿತಿ ಪಡೆದುಕೋಡರು.

## “ಕೃಷಿ ಪದತಿಯನ್ನು ಅಳವಡಿಸಲು ಸಾವಯವ ಗೋಬ್ಬರವೆ ಮುಖ್ಯ”



ದಿನಾಂಕ 18/04/2024 ರಂದು ಧರ್ಮಪೂರ ಗ್ರಾಮದ ರೈತರ ಹೋಲ ಬೇಟಿ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಸಂಯೊಜಕರಾದ ಶ್ರೀಯುತ ಚಂದ್ರಕಾಂತ್ ಮತ್ತು ಕಾರ್ಯಕರ್ತೆಯಾದ ಶ್ರೀಮತಿ ನಂದಿನಿ ರವರು ಸಮಗ್ರ ಸಾವಯವ ಕೃಷಿ ಪದ್ದತಿಯನ್ನು ಅಳವಡಿಸಲು ಸಾವಯವ ಗೋಬ್ಬರವನ್ನು ಹಾಕುವುದು, ಬದುಗಳಲಿ ಗಿಡಮರಗಳ ಹಚ್ಚಲು ತಯಾರಿ ಮಾಡಿಕೋಳುವುದು. ಬೀಜೋಪಚಾರ. ಬೀಜ ಸಂಸ್ಕರಣೆ, ಜೀವಾಮೃತ ಗ್ರೋಕೃಪಾ ಹಾಗೂ ಮಣ್ಣು ಪರೀಕ್ಷೆ ಇದರ ಉಚಿತ ತರಬೇತಿಯನ್ನು ಪಡೆದುಕೋಳುವುದು ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಯಲಿ ಸಬ್ಸಿಡಿಯಲಿ ದೋರೆಯುವ ಸ್ವಾಲಭ್ಯಗಳನ್ನು ಪಡೆದುಕೋಳುವುದು ಹಾಗೂ 20 ಜನ ರೈತರಿಗೆ ಸಮುದಾಯದ ಜನರಿಗೆ ವಿದ್ಯೆ ಜೀವನ ಅಮೃತ್ ಟ್ರಸ್ಟ, ಇದರ ಅಡಿಯಲಿ ಅನಾಥರಿಗೆ ವೀಧವೆರ ಮಕ್ಕಳಿಗೆ ಪಿ.ಯು.ಸಿ ಶೀಕ್ಷಣವನು ಉಚಿತವಾಗಿ ನೀಡುವುದು. ಹಾಗೂ ಪದವೀ ಶೀಕ್ಷಣವನು ಉದ್ಯೋಗ ಆದರಿತ ಅವಕಾಶಗಳನ್ನು ಒದಗಿಸಿಕೋಡುವುದು. ಈ ಕಾರ್ಯಕ್ರಮದಲಿ 17 ಜನರು ಮಾಹಿತಿಯನ್ನು ಪಡೆದುಕೊಂಡರು.

## "ಸಬ್ಸಿಡಿ ದರದಲ್ಲಿ ಕೃಷಿ ಯಂತ್ರೋಪಕರಣ"



ಏಪ್ರೀಲ್ 24/4/24 ರಂದು ಕಲಬುರಗಿ ಜಿಲ್ಲೆಯ ನಂದಿಕೂರ್ ಗ್ರಾಮದಲಿ ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶೀಮತಿ ಇಂದುರವರು ರೈತರಿಗೆ ತಮ್ಮ ಹೋಲದಲಿ ರೈತ ಸಂಪರ್ಕ ಕೇಂದ್ರದಲ್ಲಿ ಸರಕಾರದಲ್ಲಿ ಸಿಗುವ ಸಬ್ಸಡಿದರದಲ್ಲಿ ಕೃಷಿ ಯಂತ್ರೋಪಕರಣ ಹಾಗೂ ಪವರಟಿಲರ್ ಮಶ್ರಿನ್ ಪಡೆಯುವ 4 ಜನ ರೈತರು ಅರ್ಜಿ ಸಲ್ಲಿಸಿ ಕೃಷಿಹೊಂಡ ಮಾಡಿಕೋಳುವುದರಿಂದ ತಮ್ಮ ಹೊಲದಲ್ಲಿ ಬೋರ್ವೆಲ್‌ಗೆ ನೀರು ಕಡಿಮೆ ಅಗದಂತೆ, ಮಳೆನೀರು ಸಂರಕ್ಷಣೆ ಮಾಡಿಕೊಳ್ಳಬೇಕು. ಹೊಲದಲಿ ಬೆಳೆಗಳಿಗೆ ನೀರು ಸಹಾಯವಾಗುತದೆ ಎಂದು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ 10 ಜನ ರೈತರು ಭಾಗವಹಿಸಿ ಮಾಹಿತಿಯನ್ನು ಪಡೆದುಕೋಂಡರು.



## "ಅಂತರ್‌ರಾಷ್ಟೀಯ ಭೂಮಿ ದಿನಾಚಾರಣೆ"



ದಿನಾಂಕ 22/4/24 ರಂದು ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಚಂದ್ರಕಾಂರ್ ಮತ್ತು ಕಾರ್ಯಕರ್ತೆಯರಾದ ಶ್ರೀಮತಿ ನಂದಿನಿರವರು ಸೀತನೂರ್ ಗ್ರಾಮಕೆ ಹೋಗಿ ಅಂತರ್‌ರಾಷ್ಟೀಯ ಭೂಮಿ ದಿನಾಚಾರಣೆಯನ್ನು ಆಚರಿಸಿ 45 ಸಸಿಗಳನ್ನು ರೈತರಿಗೆ ವಿತರಿಸಲಾಯಿತ್ತು. ಮತ್ತು ಭೂಮಿಯು ನಮ್ಮ ಸೌರವ್ಯೂಹದ ಒಂದು ಗ್ರಹ. ಭೂಮಿಯನ್ನು ನೀಲಿ ಗ್ರಹ ಎಂದು ಕರೆಯಲಾಗುತ್ತದೆ. ಪ್ಲಾಸ್ಟಿಕ್ ಮುಕ್ತ ಭಾರತದ ಕನಸು ಕಂಡಿರುವ ಕೇಂದ್ರ ಸರಕಾರದ ಸಿಂಗಲ್ ಯೂಸ್ ಪ್ಲಾಸ್ಟಿಕ್ ಅನ್ನು ಪೂರ್ಣವಾಗಿ ನೀಷೆದಿಸಿದೆ. ಪ್ಲಾಸ್ಟಿಕ್ ಬಳಸುವುದರಿಂದ ಭೂಮಿಯು ಹಾಳಾಗುತ್ತದೆ ಎಂದು ತಿಳಿಸಿ ಪ್ಲಾಸ್ಟಿಕ್ ಬಳಸುವುದನು ನೀಲ್ಲಿಸಿ ಎಂದು ಅರಿವು ಮೂಡಿಸಲಾಯಿತು. ನಮ್ಮ ಬದುಕಿಗೆ ಅಗತ್ಯವಿರುವ ಗಾಳಿ, ನೀರು, ಆಹಾರವನ್ನು ನಮ್ಮ ಭೂಮಿ ನಮ್ಮಗೆ ನೀಡಿದೆ ಎಂದು ತೀಳಿಸಲಾಯಿತ್ತು.



## "ರೈತ ಸಂಪರ್ಕಕೇಂದ್ರದಿಂದ ಸೀಗುವ ಸೌಲಭ್ಯಗಳ ಬಗ್ಗೆ ಮಾಹಿತಿ"

ಏಪ್ರಿಲ್ 23 ರಂದು ಸೇವಾ ಸಂಗಮ ಸಂಸ್ಥೆಯಿಂದ ಉಜ್ಜೀವನ 'ಕಾರ್ಯಕ್ರಮದ ಯೇಜನೆಯ ಅಡ್ಡಿಯಲ್ಲಿ ಕಾರ್ಯಕರ್ತೆಯರಾದ ಶ್ರೀಮತಿ ನಂದಿನಿ ರವರು ಸೀತನೂರ್ ಗ್ರಾಮಕ್ಕೆ ಭೇಟಿ ಮಾಡಿ ರೈತ ಸಂಪರ್ಕ ಕೇಂದ್ರದಿಂದ ರೈತರಿಗೆ ಸೀಗುವ ಸೌಲಭ್ಯಗಳ ಬಗ್ಗೆ 10 ಜನರಿಗೆ ಮಾಹಿತಿಯನ್ನು ನೀಡಿ ಸ್ಪಿಂಕ್ಲರ್ ಪೈಪ್‌ಗಳನ್ನು, ರಾಶಿತಾಡಪತ್ರಿ, ಬೀಜಗಳೂ, ಕಟಾವು ಮಾಡುವ ಯಂತ್ರಗಳು. ಕೃಷಿಹೋಂಡಗಳು. ಬದು ನಿರ್ಮಾಣ, ಇವೆಲವುಗಳ ಬಗ್ಗೆ ಮಾಹಿತಿ ನೀಡಿ ರೈತರು ಸ್ಪಿಂಕ್ಲರ್ ಪೈಪ್‌ಗಳನ್ನು ಪಡೆದುಕೊಳಲು ಸಂಯೋಜಕರಾದ ಶ್ರೀ ಚಂದ್ರಕಾಂತ್ ಮತ್ತು ಕಾರ್ಯಕರ್ತೆಯಾದ ಶ್ರೀಮತಿ ನಂದಿನಿ ರವರು ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ಮಾಡಿ ಎರಡು ಜನ ರೈತರ ಅರ್ಜಿಗಳನ್ನು ಸಲಿಸಲಾಯಿತ್ತು,



# "ಸ್ಪರ್ಶ ಕ್ಯಾನ್ಸರ್ ಕಾರ್ಯಕ್ರಮ"

## "ಮನುಷ್ಯನ ದೇಹ ದೇಗುಲವಿದಂತೆ: ರಾಜಕುಮಾರ ದೇವರಮನಿ"



ಏಪ್ರಿಲ್ 2 ರಂದು ಕಲಬುರಗಿ ನಗರದ ಗಂಗಾ ನಗರದಲ್ಲಿ ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆಯ ಶಿಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕರ್ತೆಯಾದ ಕುಮಾರಿ ಅನಿತಾ ಅವರು ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮವನ್ನು ಮಕ್ಕಳ ಪಾಲಕರಿಗೆ ಅಂಗನವಾಡಿ ಕೇಂದ್ರದಲ್ಲಿ ಆಯೋಜಿಸಲಾಯಿತ್ತು, ಕ್ರಾರ್ಯಕ್ರಮದಲ್ಲಿ ಕ್ಯಾನ್ಸರ್‌ನ ಲಕ್ಷಣಗಳು, ಗುಣಗಳು ಹಾಗೂ ಕ್ಯಾನ್ಸರ್ ತಪ್ಪಾಷಣೆ ಮಾಡಿಸಿಕೊಳ್ಳುವುದರಿಂದ ಆಗುವ ಲಾಭಗಳ ಕುರಿತು ಮಾಹಿತಿಯನ್ನು ನೀಡಿ, ಮತ್ತು ಕ್ಯಾನ್ಸರ್‌ನ ವಿಧಗಳಾದ, ಚರ್ಮ ಕ್ಯಾನ್ಸರ್, ಬಾಯಿ ಕ್ಯಾನ್ಸರ್, ಗರ್ಭಕೋಶ ಕ್ಯಾನ್ಸರ್ ಬಗ್ಗೆ ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ 10 ಜನ ಸದಸ್ಯರು ಭಾಗವಹಿಸಿದರ.



ಕಲಬುರಗಿ: ತಾಲ್ಲೂಕಿನಲ್ಲಿ ಬರುವ ಫರಹತಬಾದ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿರುವ ಚೇತನ ಕೇಂದ್ರದಲ್ಲಿ ದಿನಾಂಕ: 26.04.2024 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಫರಹತಬಾದ ಇವರ ಸಂಯುಕ್ತ ಆಶ್ರಯದಲ್ಲಿ ಆಶಾ ಕಾರ್ಯಕರ್ತೆಯರಿಗೆ ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಶ್ರೀ ರಾಜಕುಮಾರ ದೇವರಮನಿ ಯವರು ಮಾತನಾಡಿ ಕ್ಯಾನ್ಸರ್ ರೋಗವು ಅತ್ಯಂತ ಘಾತಕಕಾರಿ ರೋಗಗಳಲ್ಲಿ ಒಂದಾಗಿದೆ ಇದು ಮನುಷ್ಯನ ದೇಹದ ಯಾವ ಭಾಗದಲ್ಲಿಯಾದರು ಹುಟ್ಟಿಕೊಳ್ಳಬಹುದು ಇದರ ಗುಣಲಕ್ಷಣಗಳು ಹಿಗೆ ಎಂದು ಹೇಳುವುದು ಕಷ್ಟ ಏಕೆಂದರೆ ಈ ಗುಣಲಕ್ಷಣಗಳು ಕ್ಯಾನ್ಸರ್‌ರೊಗದ ಮೂರನೇ ಹಂತದಲ್ಲಿ ಅಥವಾ ಕೊನೆಯ ಹಂತದಲ್ಲಿ ಕಾಣುತ್ತವೆ, ಕ್ಯಾನ್ಸರ್‌ರೋಗವನ್ನು ನಾವು ನಾಲ್ಕು ಹಂತದಲ್ಲಿ ಕಾಣಬಹುದಾಗಿದೆ. ಕ್ಯಾನ್ಸರ್‌ನಿಂದ ಜೀವ ಉಳಿಸಿಕೊಳ್ಳಬೇಕಾದರೆ ಮೊದಲ ಹಂತದಲ್ಲಿಯೆ ಪತ್ತೆ ಹಚ್ಚುವುದು ಅವಶ್ಯಕವಾಗಿದೆ ಇಲ್ಲವಾದಲ್ಲಿ ಈ ರೋಗದಿಂದ ಪ್ರಾಣ ಕಳೆದುಕೊಳ್ಳುವ ಸಂಭವವೇ ಹೆಚ್ಚಿರುತ್ತದೆ. ಈ ರೋಗಕ್ಕೆ ನಾವು ಇನ್ನೂಕೂಡ ಸರಿಯಾದ ಔಷದಿಗಳನ್ನು ಕಂಡು ಹಿಡಿಯುವುದರಲ್ಲಿ ವಿಫಲವಾಗಿದ್ದೇವೆ, ಈ ರೋಗಕ್ಕೆ ಪ್ರಸ್ತುತ ಔಷಧಿಗಳು ಇಲ್ಲ ಎಂದು ಭಯಪಡುವ ಅವಶ್ಯಕತೆ ಯಿಲ್ಲಾ ಆದರೆ ಕ್ಯಾನ್ಸರ್‌ನಿಂದ ಸಂಪೂರ್ಣವಾಗಿ ಗುಣಮುಖರಾಗಲು ಸಾಧ್ಯವಿಲ್ಲ. ಆದ್ದರಿಂದ ಆದಷ್ಟು ನಾವು ಮಾಡಬೇಕಾಗಿರುವುದು ಮೊದಲನೆ ಅಥವಾ ಎರಡನೇ ಹಂತದಲ್ಲಿ ಪತ್ತೆ ಮಾಡುವುದು ಇದಕ್ಕೆ ಬೇಕಾದ ಔಷಧಿ ಉಪಾಚರವನ್ನು ಪಡೆಯುವುದು ಉತ್ತಮವಾಗಿದೆ. ಪ್ರತಿಯೊಬ್ಬರು ವರ್ಷದಲಿ ಎರಡು ಬಾರಿಯಾದರು ಕ್ಯಾನ್ಸರ್ ಸ್ಕ್ರೀನಿಂಗ್ ಮಾಡಿಸಿಕೊಳ್ಳುವುದು ಜೊತೆಗೆ ವಿಶೇಷವಾಗಿ ಹೆಣ್ಣು ಮಕ್ಕಳು ತಮ್ಮದೇಹದಲ್ಲಿ ಆಗುವ ಬದಲಾವಣೆಯ ಕುರಿತು ಗಮನ ಹರಿಸಬೇಕು ಮನುಷ್ಯನ ದೇಹ ದೇಗುಲವಿದಂತೆ ಸರಿಯಾದ ಸಮಯಕ್ಕೆ ಪೂಜೆ ಪುನಸ್ಕಾರ ನೈವಿಧ್ಯ ಮಾಡದಿದ್ದರೆ ಹಾಳು ಬಾವಿಯಂತೆ ಯಾಗುತ್ತದೆ ಅಂದರೆ ಅನೇಕ ರೋಗ ರುಜಿನ್‌ಗಳಿಗೆ ಬಲಿಯಾಗುತ್ತದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಒಟ್ಟು 20 ಆಶಾ ಕಾರ್ಯಕರ್ತೆಯರು ಭಾಗವಹಿಸಿದರು.





ದಿನಾಂಕ 28 ರಂದು ಸೀತನೂರ ಗ್ರಾಮಕ್ಕೆ ಹೋಗಿ, ಕಾರ್ಯಕ್ರಮದ ಕಾರ್ಯಕರ್ತೆಯರಾದ ಶ್ರೀಮತಿ ನಂದಿನಿ ರವರು, ರೈತ ಬಾಂಧವರನ್ನು ಭೇಟಿ ನೀಡಿ ಕ್ಯಾನ್ಸರ್ ಸಭೆಯನ್ನು ಆಯೋಜಿಸಿ, ವ್ಯಕ್ತಿಗಳಲ್ಲಿ ವಿವಿಧ ರೀತಿಯಲ್ಲಿ ಕ್ಯಾನ್ಸರ್ ಹರಡಬಹುದು, ಅವುಗಳೆಂದರೆ ಗಂಟಲು ಕ್ಯಾನ್ಸರ್, ಬೋನ್‌ಮೂಳೆ ಕ್ಯಾನ್ಸರ್, ಗರ್ಭಕೋಶ ಕ್ಯಾನ್ಸರ್, ಸ್ತನ ಕ್ಯಾನ್ಸರ್, ಬಾಯಿ ಕ್ಯಾನ್ಸರ್, ಚರ್ಮ ಕ್ಯಾನ್ಸರ್, ದೊಡ್ಡ ಕರುಳಿನ ಕ್ಯಾನ್ಸರ್, ಮನುಷ್ಯನ ವಿವಿಧ ಚಟಗಳಿಂದ ಕ್ಯಾನ್ಸರ್ ಗೆ ಈಡಾಗಲು ಕಾರಣವಾಗುತ್ತಾನೆ. ಜನರು ಉತ್ತಮವಾದ ಆರೋಗ್ಯವನ್ನು ಪಡೆಯಲು ಒಳ್ಳೆಯ ತರಕಾರಿಗಳನ್ನು ಸೇವಿಸುವುದು, ಬೀಡಿ, ತಂಬಾಕು, ಸೇವನೆಯಿಂದ ದೂರವಿರುವುದು. ಈ ಸಭೆಯಲ್ಲಿ 21 ಜನರು ಭಾಗವಹಿಸಿ ಮಾಹಿತಿಯ ಪ್ರೇರಣೆಯನ್ನು ಪಡೆದುಕೊಂಡರು.

# ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ

## "ವಿದ್ಯೆ ಕಲಿಸದ ತಂದೆ ಬುದ್ಧಿ ಹೇಳದ ಗುರು ಬಿದ್ದಿರಲು ಬಂದು ನೋಡದ ತಾಯಿ ಶುದ್ಧ ವೈರಿಗಳು ಸರ್ವಜ್ಞ"



ಕಲಬುರಗಿ: ತಾಲ್ಲೂಕಿನಲ್ಲಿ ಬರುವ ಹಾಗರಗುಂಡಗಿ ಗ್ರಾಮದಲಿ ದಿ.17.04.2024 ಸೇವಾಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಢೇಶನ್ ಕಲಬುರಗಿ ಇವರ ಸಂಯುಕ್ತ ಆಶ್ರಯದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳ ಪಾಲಕರ ಗುಂಪು ರಚನೆ ಕಾರ್ಯಕ್ರಮವನ್ನು (ಪೇರೆಂಟ್ಸ ಚಾಂಪಿಯನ್) ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಶ್ರೀಮತಿ ಸ್ವೇತಯೋಜನಾ ವ್ಯವಸ್ಥಾಪಕರು ಸೇವಾಸಂಗಮ ಸಂಸ್ಥೆ ಕಲಬುರಗಿ ಇವರು ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ತಾಯಂದಿರ ಗುಂಪು ರಚನೆ ಮಾಡುವ ಉದ್ದೇಶ ಹಾಗೂ ಫಲಿತಾಂಶದ ಕುರಿತು ಮಾಹಿತಿಯನ್ನು ನೀಡಿದರು. ಈ ಗುಂಪಿನ ಮುಖ್ಯ ಉದ್ದೇಶ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳನ್ನು ಸಮಾಜದ ಮುಖ್ಯವಾಹಿನಿಗೆ ತರುವುದಾಗಿದೆ ಹಾಗೂ ಸಾಮಾನ್ಯ ಮಕ್ಕಳಂತೆ ನಮ್ಮ ಮಕ್ಕಳು ಆ ಮಕ್ಕಳೊಂದಿಗೆ ಸಮಾಜದಲ್ಲಿ ಬಾಲ್ಯವನ್ನು ಸವಿಯುವ ಮೂಲಕ ಭವಿಷ್ಯದಲ್ಲಿ ತಮ್ಮ ಬಾಲ್ಯ ಸಿಹಿನೇನಪಾಗಿ ಉಳಿಯ ಬೇಕಾಗಿದೆ. ಅದಕ್ಕೆ ಈ ಗುಂಪು ಕಾರ್ಯನಿರ್ವಹಿಸಬೇಕಾಗುತ್ತದೆ ಇದರ ಕಾರ್ಯ ಅಂತಹ ಮಕ್ಕಳನ್ನು ಪತ್ತೆ ಹಚ್ಚುವ ಮೂಲಕ ಅಥವಾ ಎಲ್ಲಾ ತಾಯಂದಿರಿಗೆ ತಮ್ಮ ಮಕ್ಕಳ ಬೇಳವಣಿಗೆಯ ಕುರಿತು ಜಾಗೃತಿಯನ್ನು ಮೂಡಿಸುವುದಾಗಬೇಕು ಕುಂಠಿತ ವಿರುವ ಮಕ್ಕಳಿಗ ಸೇವಾ ಸಂಗಮ ಸಂಸ್ಥೆಯ ಸಹಾಯದಲ್ಲಿ ಆ ಮಕ್ಕಳಿಗೆ ಉತ್ತೇಜಕ ಚಟುವಟಿಕೆಯನ್ನು ನೀಡುವ ಮತ್ತು ಅದನ್ನು ತಾಯಂದಿರು ಮಕ್ಕಳಿಗೆ ಪ್ರತಿದಿನ ತಮ್ಮ ಮನೆಯಲ್ಲಿ ಮಾಡಿಸುವುದು ಇದ್ದರಿಂದ ಮಕ್ಕಳ ನ್ಯೂನತೆ ಅಥವಾ ಬೆಳವಣಿಗೆ ಕುಂಠಿತವನ್ನು ಮುಕ್ತಗೊಳಿಸುವ ಮೂಲಕ ಮಕ್ಕಳಲ್ಲಿ ಬದಲಾವಣೆಯನ್ನು ತರುವಂತೆಯಾಗಬೇಕು ಹಾಗೂ ಇಂತಹ ಮಕ್ಕಳ ಕುಟುಂಬಕ್ಕೆ ಸರಕಾರದ ಸೌಲಭ್ಯಗಳು ದೊರೆಯುವಂತೆ ಮಾಡುವುದು ಅವಶ್ಯಕ ವಿರುವ ಸೌಲಭ್ಯಗಳಿಗಾಗಿ ಸರಕಾರಕ್ಕೆ ಮನವಿಯನ್ನು ಸಲ್ಲಿಸುವುದಾಗಿದೆ ಎಂದು ಹೇಳಿದರು. ಈ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಶ್ರೀ ರಾಜಕುಮಾರ ದೇವರಮನಿ ಇವರು ತಾಯಂದಿರನ್ನು ಉದ್ದೇಶಿಸಿ ಹೀಗೆ ಹೇಳಿದರು "ವಿದ್ಯೆ ಕಲಿಸದ ತಂದೆ ಬುದ್ಧಿ ಹೇಳದ ಗುರು ಬಿದ್ದಿರಲು ಬಂದು ನೋಡದ ತಾಯಿ ಶುದ್ಧ ವೈರಿಗಳು ಸರ್ವಜ್ಞ" ಈ ವಾಕ್ಯ ಸರ್ವಜ್ಞನೇ ಹೇಳಿದರು ಪ್ರಸ್ತುತ ಪ್ರತಿಯೊಬ್ಬ ಪಾಲಕರಿಗೂ ಇದು ಹೊಲುತ್ತದೆ ಏಕಂದರೆ ತಮ್ಮ ಮಕ್ಕಳಲ್ಲಿ ನ್ಯೂನತೆ ಇದೆ ಎಂದು ಅವರ ವಿಧ್ಯಾಭ್ಯಸದ ಕಡೆ ಗಮನ ಹರಿಸದೇ ಮನೆಯ ಒಂದು ಮೂಲೆಯಲಿ ಮಗುವನ್ನು ಬಿಟ್ಟರೆ ಅಂತಹ ಪಾಲಕರು ನಿಜವಾಗಲು ಆ ಮಕ್ಕಳ ಪಾಲಿಗೆ ವೈರಿಗಳೇ ಸರಿ ಆದ್ದರಿಂದ ಮಕ್ಕಳಿಗೆ ವೈರಿಗಳಾಗದೇ ಅವರ ಹಿತೇಶಿಗಳಾಗಿ ಅವರ ಬದುಕಿಗೆ ಬೆಳಕಾಗಿ ಎಂದು ಮನ ಮುಟ್ಟುವಂತೆ ತಿಳಿಸಿದರು. ಕಾರ್ಯಕ್ರಮದಲ್ಲಿ ಮಕ್ಕಳ ತಾಯಂದಿರು, ಮಕ್ಕಳು, ಅಂಗನವಾಡಿ ಕಾರ್ಯಕರ್ತೆಯರು ಒಟ್ಟು 15 ಜನರು ಭಾಗವಹಿಸಿದರು



## "ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಜಾಗೃತಿ ಕಾರ್ಯಕ್ರಮ"



ದಿನಾಂಕ. 18.4.24 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮ್‌ಜೀ ಫೌಂಡೇಶನ್ ಸಂಯೋಗದಲ್ಲಿ ಕಲಬುರಗಿ ಜಿಲ್ಲೆಯ ಫಿರೋಜಬಾದ್ ಗ್ರಾಮದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ತರಬೇತಿ ಜಾಗೃತಿ ಕಾರ್ಯಕ್ರಮ ಹಮ್ಮಿಕೋಳ್ಳಲಾಯಿತ್ತು. ಈ ಒಂದು ಕಾರ್ಯಕ್ರಮದ ಬಗ್ಗೆ ಗ್ರಾಮದ ಸ್ಥಳಿಯ ಜನರಿಗೆ ಬೆಳೆವಣಿಗೆ ಕುಂಠಿತವಿರುವ ಮಕ್ಕಳನ್ನು ನಮ್ಮ ಸಂಸ್ಥೆಯು ಒಂದು ವರ್ಷದಿಂದ ಪತ್ತೆ ಹಚ್ಚುತ ಬರುತ್ತೀದೆ, ಮತ್ತು ಬೆಳೆವಣಿಗೆ ಕುಂಠಿತವಿರುವ ಮಕ್ಕಳು ಅಂದರೆ ಆ ಮಗುವಿನಲ್ಲಿ ಏನಾದರೂ ನ್ಯೂನತೆ ಕಂಡುಬಂದರೆ ಅತಿ ಶೀಘ್ರ ಪತ್ತೆ ಹಚ್ಚುವುದು, ಅದು ಹೇಗೆ ಅಂದರೆ 5 ತಿಂಗಳಾದರು ಇನ್ನು ಕತ್ತು ಕುಡದಿರುವುದು, 9 ತಿಂಗಳಾದರು ಕುಳಿತುಕೋಳ್ಳಲು ಬಾರದೆ ಇರುವುದು, 1 ವರ್ಷದ ಮಗುವಾದರು ಇನ್ನು ಮಗು ಮಾತನಾಡದೆರುವುದು, ಮಗು ಚಲನವಲನ ಮಾಡದೆರುವುದು ಶಬ್ದಕ್ಕೆ ಪ್ರತಿಕ್ರಿಯೆ ನೀಡದೆರಿವುದು, ಬೇರೆ ಮಕ್ಕಳ ಜೊತೆ ಭೇರೆಯದೆ ಇರುವುದು, ಇವೇಲ್ಲಾ ಅಂಶಗಳು ಮಕ್ಕಳಲ್ಲಿ ಬೆಳೆವಣಿಗೆ ನ್ಯೂನತೆಗಳು ಕಂಡು ಬರುತ್ತವೆ ಇಂತಹ ಮಕ್ಕಳು ನಿಮ್ಮ ಅಕ್ಕ–ಪಕ್ಕದಲ್ಲಿ ಸಂಬಂದಿಕರಲ್ಲಿ ಇದ್ದರೆ ನಮ್ಮ ಸೇವಾ ಸಂಗಮ ಸಂಸ್ಥೆಗೆ ತಿಳಿಸಿ ಎಂದು ಜಾಗೃತಿ ಮೂಡಿಸಲಾಯಿತು, ಈ ಕಾರ್ಯಕ್ರಮವನ್ನು ಸೇವಾ ಸಂಗಮ ಸಂಸ್ಥೆಯ ಕಾರ್ಯಕರ್ತೆಯರಾದ ದ್ರಾಕ್ಷಣಿರವರು ನಡೆಸಿಕೊಟ್ಟರು ಈ ಕಾರ್ಯಕರ್ಮದಲ್ಲಿ ಒಟ್ಟು 18 ಜನರು ಭಾಗವಹಿಸಿದ್ದರು.

## "ಓ.ಆರ್.ಎಸ್. ಮನೆಯಲ್ಲಿಯೇ ತಯಾರಿಸಿ: ಗಂಗುಬಾಯಿ"



ದಿನಾಂಕ: 18/04/2024 ರಂದು ಕಲಬುರಗಿ ತಾಲ್ಲೂಕಿನಲ್ಲಿ ಬರುವ ತಾಡತೆಗನೂರ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಫರಹತಬಾದ್ ಇವರ ಸಂಯುಕ್ತಆಶ್ರಯದಲ್ಲಿ ಬೇಸಿಗೆಯಲ್ಲಿ ನಮ್ಮ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳುವುದ ಹಾಗೂ ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳ ಪತ್ತೆ ಹಚ್ಚುವ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಶ್ರೀಮತಿ ಗಂಗುಬಾಯಿ ಬಿ.ಎಚ್.ಈ.ಓ. ಫರಹತಬಾದ್ ಇವರು ಮಾತನಾಡಿ ಕಲಬುರಗಿ ಜಿಲ್ಲೆ ಪ್ರಸಿದ್ಧಿ ಪಡಿದಿರುವುದು ಬೆಸಿಗೆಯ ಬಿಸಿಲಿನಿಂದ ಈ ಬಿಸಿಲಿನಿಂದ ನಮ್ಮ ಹಾಗೂ ಮನೆಯವರ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳುವುದು ಎಂಬುವುದು ಮನೆಯ ಗೃಹಣಿಯರು ಅರಿತಿರಬೇಕು ಈ ಸಮಯದಲ್ಲಿ ಹಲವು ರೀತಿಯಾ ತಂಪು ಪಾನಿಯಗಳನ್ನು ಹೆಚ್ಚಿಗೆ ಸೇವನೆ ಮಾಡಿ ಆರೋಗ್ಯವನ್ನು ಹಾಳು ಮಾಡಿಕೊಳ್ಳದೇ ತಾವು ಸೇವನೆ ಮಾಡುವ ನೀರಿನಲ್ಲಿ ಮನೆಯಲ್ಲಿಯೇ ತಾವೇ ತಯಾರಿಸಿದ ಓ.ಆರ್.ಎಸ್. ಸೇರಿಸಿ ಕುಡಿಯುವುದರಿಂದ ದೇಹದ ತಾಪಮಾನ ಸಮತಟ್ಟವಾಗಿರುತ್ತದೆ ಇದ್ದರಿಂದ ದೇಹದಲ್ಲಿ ನೀರಿನ ಅಂಶ ಕಡಿಮೆಯಾಗುವುದನ್ನು ತಡೆಗಡುತ್ತದೆ. ಓ.ಆರ್.ಎಸ್ ತಯಾರಿಸಲು ಒಂದು ವಿಧಾನವಿದೆ ಆ ವಿಧಾನವನ್ನು ಅನುಸರಿಸಿ ಆ ವಿಧಾನವನ್ನು ನಾನು ತಮ್ಮಗೆ ಹೇಳಿಕೊಡುತ್ತೇನೆ ಅದನ್ನು ತಾವು ಅನುಸರಿ ತಯಾರಿಸದರೆ ಅದು ತಮ್ಮ ಕುಟುಂಬದ ಸದಸ್ಯರ ಆರೋಗ್ಯಕ್ಕೆ ಜೀವಾಮೃತವಾಗಿ ಪರಿಗಣಿಸಬಹುದು ಎಂದು ಹೆಳಿದರು. ಕಾರ್ಯಕ್ರಮದಲ್ಲಿ ಶ್ರೀ ರಾಜಕುಮಾರ ದೇವರಮನಿ ಇವರು ಮಾತನಾಡಿ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳನ್ನು ಶೀಘ್ರವಾಗಿ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಮೂಲಕ ಪತ್ತೆ ಮಾಡುವ ಉದ್ದೇಶ ಆ ಮಕ್ಕಳ ಬೆಳವಣಿಗೆಯನ್ನು ಕುಂಠಿತ ಗೊಂಡಿರುವದನ್ನು ಗುರುತ್ತಿಸುವ ಮೂಲಕ ಶೀಘ್ರವಾಗಿ ಆ ಮಕ್ಕಳಿಗೆ ಉತ್ತೇಜಕ ಚಟುವಟಿಕೆಯನ್ನು ನೀಡುವ ಮೂಲಕ ಮಕ್ಕಳ ಬೆಳವಣಿಗೆಯಲ್ಲಿ ಬದಲಾವಣೆ ತರಬಹುದಾಗಿದೆ ಆದ್ದರಿಂದ ಅಂತಹ ಮಕ್ಕಳ ಪಾಲಕರಿಗೆ/ ತಾಯಂದಿರಿಗೆ ಇದರ ಕುರಿತು ಜಾಗೃತಿಯನ್ನು ಮೂಡಿಸಲಾಗುತ್ತಿದೆ ಎಲ್ಲಾ ತಾಯಂದಿರು ತಮ್ಮ ಮಕ್ಕಳ ಬೆಳವಣಿಗೆಯ ಕುರಿತು ಕಾಳಜಿಯನ್ನು ವಹಿಸಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ತಾಯಂದಿರು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು ಒಟ್ಟು 30 ಜನ ಭಾಗವಹಸಿದರು.




## "ಪೌಷ್ಟಿಕೌಂಶ ಅಹಾರದ ಕುರಿತು ಕಾರ್ಯಕ್ರಮ"



ಎಪ್ರಿಲ್ 14 ರಂದು ಕಲಬುರಗಿ ತಾಲ್ಲೂಕಿನ ಕಡಕಪೂರ ಶಹಬಜಾರ ಅಂಗನವಾಡಿ ಕೇಂದ್ರದಲ್ಲಿ ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮಜಿ ಫೌಂಡೇಷನ ಸಂಯೋಗದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಮತ್ತು ಪೌಷ್ಟೀಕೌಂಶ ಅಹಾರದ ಕುರಿತು ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. 0–6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳಿಗೆ ಮೂರು ತಿಂಗಳಿಗೆ ಕತ್ತು ನಿಂತ್ತಿರಬೇಕು ಒಂದು ವೇಳೆ ನಿಲ್ಲದಿದ್ದರೆ, ಮಗುವಿಗೆ ನಡೆಯುದಕ್ಕೆ ಬಾರದಿದ್ದರೆ, ಯಾವುದರಲ್ಲಿ ಕುಂಠಿತ ಹೊಂದಿದೆ ಎಂದು ಕಂಡುಹಿಡಿದು ಆ ಮಗುವಿಗೆ ವಿಶ್ಲೇಷಣೆ ಮಾಡಿ ಚಟುವಟಿಕೆ ಮನೆಯಲ್ಲಿ ಮಾಡುವುದರ ಜೊತೆಗೆ ಮತ್ತು ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಉತ್ತೇಜಕ ಚಟುವಟಿಕೆ ನೀಡುವುದರ ಮೂಲಕ ಮಗುವಿನಲ್ಲಾದ ಬದಲಾವಣೆ ತರುವುದಾಗಿದೆ ಮತ್ತು ಗರ್ಭಿಣಿ ಬಾಣಂತಿರಿಗೆ ಪೌಷ್ಟೀಕೌಂಶ ಅಹಾರದ ಸೇವನೆ ಮಾಡುವುದರ ಬಗ್ಗೆ ಲಕ್ಷ್ಮಣರಾವ್ ಅವರು ತಿಳಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ 15 ಜನ ಮಹಿಳೆಯರು ಮಕ್ಕಳು ಮತ್ತು ಅಂಗನವಾಡಿ ಶಿಕ್ಷಕಿಯರು ಉಪಸ್ಥಿತರಿದ್ದರು.

## "ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಜಾಗೃತಿ ಕಾರ್ಯಕ್ರಮ"



ಏಪ್ರಿಲ್ 02 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ ವತಿಯಿಂದ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಅನಿತಾ ಅವರು ಅಂಬಿಕಾ ನಗರದ ಅಂಗನವಾಡಿ ಕೇಂದ್ರ 02 ರಲ್ಲಿ ಬೆಳವಣಿಗೆ ಕುಂಠಿತವಿರುವ ಮಕ್ಕಳ ಬಗ್ಗೆ ಮಾಹಿತಿ ಕಾರ್ಯಕ್ರಮವನ್ನು ಹಮ್ಮೀಕೋಳ್ಳಲಾಯಿತು. ಈ ಒಂದು ಕಾರ್ಯಕ್ರಮದಲ್ಲಿ ಮಕ್ಕಳು ಹಾಗೂ ಪಾಲಕರು ಉಪಸ್ಥಿತರಿದ್ದರು. ಬೆಳವಣಿಗೆ ಕುಂಠಿತವಿರುವ ಮಕ್ಕಳನ್ನು ಗುರುತಿಸಿ ಆ ಮಕ್ಕಳ ವಿಶ್ಲೇಷಣೆ ಮಾಡಿ ಆ ಮಕ್ಕಳಿಗೆ ಅವಶ್ಯಕತೆ ಇರುವ ಸಾಧನಾ ಸಲಕರಣೆ ನೀಡಿ ಹಾಗೂ ಮಕ್ಕಳಿಗೆ ಚಟುವಟಿಕೆ ಕಲ್ಪಿಸುವುದರ ಮೂಲಕ ಮಕ್ಕಳ ಬೆಳವಣಿಗೆಯಲ್ಲಿ ಸುಧಾರಣೆ ತರುವಂತ ಕೆಲಸದಲ್ಲಿ ಸೇವಾ ಸಂಗಮ ಸಂಸ್ಥೆ ತೊಡಗಿದೆ ಎಂದು ಹೇಳಬಹುದು. ಈ ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆಯಾದ ಶ್ರೀಮತಿ ಅನ್ನಪೂರ್ಣ ಹಾಗೂ ಡಾ. ಸಂದೇಶ್ ಕುಲಕರ್ಣಿ ಪಾಲಕರು ಹಾಗೂ ಮಕ್ಕಳೂ ಒಟ್ಟು 10 ಜನ ಭಾಗವಹಿಸಿದರು.



ದಿನಾಂಕ 13/04/2024 ರಂದು ಕಲಬುರಗಿ ನಗರದ ನಾಜಾ ಕಾಲೋನಿಯಲ್ಲಿ ಸೇವಾ ಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜೀ ಫೌಂಡೇಷನ್ ಅವರ ಸಂಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕುರಿತು ಅರಿವು ಕಾರ್ಯಕ್ರಮ ಹಮಿಕ್ಕೊಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆಯಾದ ಶ್ರೇಮತಿ ಮಹಮದಿ ಬೇಗಂ ಅವರು ಜೋತೆಗೆ 8 ಜನ ಪಾಲಕರು ಪಾಲ್ಗೋಡಿದರು 0–6 ವರ್ಷದೋಳಗಿನ ಬೆಳವಣಿಗೆಯಲ್ಲಿ ಹಿಂದುಳಿದ ಮಕ್ಕಳನ್ನು ಪತ್ತೆ ಹಚ್ಚಿ ನಮ್ಮಗೆ ತಿಳಿಸಿ ಅಂದರೆ ವಯಸ್ಸಿಗೆ ತಕ್ಕಂತೆ ಬೇಳವಣಿಗೆ ಹೊಂದದ್ದಿರುವುದು. ಅಂದರೆ 1 ಅಥವಾ 2 ವರ್ಷ ಆಗಿದರು. ಅವರಿಗೆ ನಡೆಯಲು ಬಾರದಿರುವುದ್ದು. ಕತ್ತು ನಿಲ್ಲದಿರುವುದ್ದು, ಮಾತನಾಡಲು ಬಾರದೆ ಇರುವಂತಹ ಮಕ್ಕಳು ನಿಮ್ಮ ಅಂಗನವಾಡಿ ಕೇಂದ್ರದಲ್ಲಿ ಅಥವಾ ನಿಮ್ಮ ಸುತ್ತ ಮುತ್ತಇದ್ದರೆ ತಿಳಿಸಿ ಆ ಮಕ್ಕಳಿಗೆ ಚಟುವಟಿಕೆ ನೀಡುವ ಮೂಲಕ ಬದಲಾವಣೆ ತರಲು ಪ್ರಯತ್ನಿಸುತ್ತೇವೆ. ಜೋತೆಗೆ ಸರ್ಕಾರಿ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದು ತಿಳಿಸಲಾಯಿತ್ತು.



ಎಪ್ರಿಲ್ 17 ರಂದು ಕಲಬುರಗಿ ತಾಲ್ಲೂಕಿನ ಹಡಗಿಲ ಹಾರುತಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮಜಿ ಫೌಂಡೆಷನ ಸಂಯೋಗದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕುರಿತು ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. 0–6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳಿಗೆ ಮೂರು ತಿಂಗಳಿಗೆ ಕತ್ತು ನಿಂತ್ತಿರಬೇಕು ಒಂದು ವೇಳೆ ನಿಲ್ಲದಿದ್ದರೆ, ಮಗುವಿಗೆ ನಡೆಯುದಕ್ಕೆ ಬಾರದಿದ್ದರೆ, ಯಾವುದರಲ್ಲಿ ಕುಂಠಿತ ಹೊಂದಿದೆ ಎಂದು ಕಂಡುಹಿಡಿದು ಆ ಮಗುವಿಗೆ ವಿಶ್ಲೇಷಣೆ ಮಾಡಿ ಚಟುವಟಿಕೆ ಮನೆಯಲ್ಲಿ ಮಾಡುವುದರ ಜೊತೆಗೆ ಮತ್ತು ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಉತ್ತೇಜಕ ತರಬೇತಿ ನೀಡುವುದರ ಮೂಲಕ ಮಗುವಿನಲ್ಲಿ ಬದಲಾವಣೆ ತರಬಹುದಾಗಿ ಎಂದು ಲಕ್ಷ್ಮಿಅವರು ತಿಳಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ 15 ಜನ ಮಹಿಳೆಯರು ಮತ್ತು ಮಕ್ಕಳು ಉಪಸ್ಥಿತರಿದ್ದರು.



ಎಪ್ರಿಲ್ 26 ರಂದು ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮಜಿ ಫೌಂಡೆಷನ ಸಂಯೋಗದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದಡಿಯಲ್ಲಿ ಕಲಬುರಗಿ ನಗರದ ಈಕ್ಬಲ್ ಕಾಲೋನಿಯ ಅಂಗನವಾಡಿ ಕೇಂದ್ರದಲ್ಲಿ 0–6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳನ್ನು ಹೇಗೆ ಗುರುತಿಸಬೇಕು ಗುರುತಿಸಿದ ನಂತರ ಅವರಲ್ಲಿರುವ ನ್ಯೂನತೆಯನ್ನು ಕಡಿಮೆ ಮಾಡಲು ಹಲವಾರುರೀತಿಯ ಚಟುವಟಿಕೆ ಮಾಡುವುದರ ಮೂಖಾಂತರ ಅವರಲ್ಲಿರುವ ನ್ಯೂನತೆಯ ತೀವ್ರತೆಯನ್ನು ಕಡಿಮೆ ಮಾಡಬಹುದು. ಸರಕಾರದಿಂದ ವಿವಿಧ ಯೋಜನೆಗಳಿವೆ ಅವುಗಳನ್ನು ಪಡೆಯಬೇಕಾದರೆ ಯಾವೆಲ್ಲಾ ದಾಖಲಾತಿಗಳು ಬೇಕಾಗುತ್ತವೆ ಎಂದು ಶ್ರೀಮತಿ ಶಿವಕಾಂತ ಅವರು ತಿಳಿಸಿದರು, ಈ ಒಂದು ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಹಿರಾಪುರ ವಲಯದಿಂದ ಪಿ.ಎಚ್.ಸಿ.ಓ ಆದ ಅರ್ಚನಾ ಮತ್ತು ಅಂಗನವಾಡಿ ಕಾರ್ಯಕರ್ತೆಯಾದ ಅಬೇದ ಬೇಗಂ, ಐಶಾ ಬೇಗಂ ಮತ್ತು ನಾಗಮ್ಮ ಉಪಸ್ಥಿತರಿದ್ದರು 15 ಜನ ಮಕ್ಕಳು ಪಾಲಕರು ಭಾಗವಹಿಸಿದರು.

## "ಬಾಲ್ಯ ವಿವಾಹ ತಡೇಗಟುವ ಕುರಿತು ಅರಿವು ಕಾರ್ಯಕ್ರಮ"



ದಿನಾಂಕ 23/04/2024 ರಂದು ಕಲಬುರಗಿ ನಗರದ ಭುವಿಗಲ್ಲಿಯಲ್ಲಿ ಸೇವಾ ಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜೀ ಫೌಂಡೇಷನ ಅವರ ಸಂಯೋಗದಲಿ ಬಾಲ್ಯ ವಿವಾಹ ತಡೇಗಟುವ ಕುರಿತು ಅರಿವು ಕಾರ್ಯಕ್ರಮ ಹಮ್ಮಿಕ್ಕೋಳಲಾಗಿದ್ದು, ಈ ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆಯಾದ ಶ್ರೇಮತಿ ಸುಲೋಚನಾ ಅವರು ಹಾಗೂ ಶ್ರೀಮತಿ ಶಶಿಕಲಾ ಮೇಲ್ವಚಾರಕರು ಹಾಗೂ 20 ಜನ ಅಂಗನವಾಡಿ ಕಾರ್ಯಕರ್ತೆಯರು ಪಾಲ್ಗೊಂಡಿದರು. ಬೇಸಿಗೆ ರಜೆ ಪ್ರಾರಂಭವಾಗುತ್ತಿದ್ದು 10 ನೇ ತರಗತಿ ಮುಗಿದ ತಕ್ಷಣ ಮದುವೆಗೆ ತಯಾರಿ ಮಾಡುತ್ತಾರೆ ಹಾಗಾಗಿ ತಾವೆಲ್ಲ ಅಂಗನವಾಡಿ ಕಾರ್ಯಕರ್ತೆಯರು ಬಾಲ್ಯವಿವಾಹ ನಡೆಯುವುದನ್ನು ತಡೆಯುವುದು ಜೋತೆಗೆ ಬಾಲ್ಯವಿವಾಹ ಆಗದಂತೆ ನೋಡಿಕ್ಕೋಳುವುದ್ದು ನಮ್ಮೇಲ್ಲರ ಜವಾಬ್ದಾರಿ ಎಂದ್ದು ತಿಳಿಸಲಾಯಿತ್ತು. ಬಾಲ್ಯ ವಿವಾಹವು ಕಾನೂನಿನ ಪ್ರಾಕಾರ ಅಪರಾಧ ಒಂದು ವೇಳೆ ಮಾಡಿದ್ದರೆ ಜೈಲ್ಲು ಶಿಕ್ಷೆ ಖಂಡಿತ ಜೋತೆಗೆ 50.000 ದಂಡ ವಿಧಿಸಲಾಗುವುದು ಎಂದು ಮಾಹಿತಿ ನಿಡಲಾಯಿತ್ತು.

# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

## TO DONATE

www.orbitbidar.in

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುರ್ನವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಪೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.



**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್
ಪ್ರತಿ ತಿಂಗಳು 4000/– ವರ್ಷಕ್ಕೆ 40,000/–

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಮಗು
ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/–

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

| | |
|---|---|
| Name | : Sevasangama Development Society |
| Account No | : 16040100022902 |
| IFSC Code | : FDRL0001604 |
| Bank | : Federal Bank |
| Branch | : Super Market Kalaburagi |

Fr. Victor Anil Vas
Director, Seva Sangama & ORBIT


Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in